# ಕನ್ನಡ ಭಾಷಾ ಬೋಧನೆ (Teaching of Kannada Language)

## ಭಾಷೆಯ ಅರ್ಥ ಮತ್ತು ವ್ಯಾಖ್ಯೆ

ಸೃಷ್ಟಿಯಲ್ಲಿ ಮಾನವ ಅತ್ಯಂತ ಮುಂದುವರಿದ ಪ್ರಾಣಿ. ಇದಕ್ಕೆ ಕಾರಣ ಅವನಿಗೆ ಯೋಚಿಸುವ ಶಕ್ತಿ ಹಾಗೂ ಮಾತನಾಡುವ ಶಕ್ತಿ ಇರುವುದೇ ಆಗಿದೆ. ಭಾಷೆ ಒಂದು ಮಾಧ್ಯಮ. ಭಾಷೆ ಸ್ವೀಕೃತ ಸಂಕೇತಗಳ ಒಂದು ವ್ಯವಸ್ಥೆ. ಭಾವನೆಗಳನ್ನು, ಅನಿಸಿಕೆಗಳನ್ನು ಮತ್ತೊಬ್ಬನಿಗೆ ತಿಳಿಸುವ ಸಾಧನವೇ ಭಾಷೆ. ಭಾಷೆ ಎಂಬ ಪದವು ಸಂಸ್ಕೃತದ 'ಭಾಷ್' ಎಂಬ ಧಾತುವಿನಿಂದ ಬಂದಿದೆ. 'ಭಾಷ್' ಎಂಬ ಶಬ್ದ 'ಮಾತನಾಡು' ಎಂಬ ಅರ್ಥವನ್ನು ಹೊಂದಿದೆ.

ಪ್ರಪಂಚದಲ್ಲಿ ಸುಮಾರು 6000 ಭಾಷೆಗಳಿವೆ. ಭಾರತದಲ್ಲಿ 650 ಕ್ಕೂ ಹೆಚ್ಚು ಮಾತೃಭಾಷೆಗಳು ಬಳಕೆಯಲ್ಲಿದ್ದು, 3000ಕ್ಕೂ ಹೆಚ್ಚು ಆಡು ಭಾಷೆಗಳು ಬಳಕೆಯಲ್ಲಿವೆ.

ಇಂಗ್ಲಿಷ್‌ನ 'Language' ಎಂಬ ಪದವನ್ನು ಅವಲೋಕಿಸಿದಾಗ ಲ್ಯಾಟಿನ್‌ನ `Lingua' ಎಂಬ ಧಾತುವಿನಿಂದ ಬಂದಿದೆ. `Lingua' ಎಂದರೆ 'ನಾಲಿಗೆ'. ನಾಲಿಗೆ ನುಡಿದದ್ದು `Spoken word' ಎಂಬ ಶಬ್ದದಿಂದ ಬಂದಿದೆ.

ಭಾಷೆಯನ್ನು ಮೂರ್ತ ಹಾಗೂ ಅಮೂರ್ತ ಎಂದು ವರ್ಗೀಕರಿಸಬಹುದು. ಭಾಷೆಯ ಮೂರ್ತ ರೂಪವೇ ಬರವಣಿಗೆ. ಅಮೂರ್ತ ರೂಪವೇ ಮಾತು ಅಥವಾ ನುಡಿ.

## ಭಾಷೆಯ ವ್ಯಾಖ್ಯೆಗಳು

- 'ಸಮಾಜದ ವ್ಯಕ್ತಿಗಳು ಅವರ ಪರಸ್ಪರ ವ್ಯವಹಾರ ಸೌಲಭ್ಯಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ' **–ಈ. ಎಚ್. ಸ್ಟುರ್ಟೆವಾಂಟ್**
- 'ಸಮಾಜ ಸಂಪರ್ಕಕ್ಕಾಗಿ ಇರುವ ಯಾದೃಚ್ಛಿಕ ಮೌಖಿಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ' **–ಬ್ಲಾಕ್ ಮತ್ತು ಟ್ರೇಗರ್**
- 'ಮನಸ್ಸಿರುವ ಯಾವುದೇ ಪ್ರಾಣಿಯ ಅನುಭವದ ಅಭಿವ್ಯಕ್ತಿಯೇ ಭಾಷೆ'**–ಐಸ್ಲರ್**

## ಭಾಷೆಯ ಸ್ವರೂಪ



- ಭಾಷೆ ಒಂದು ವ್ಯವಸ್ಥೆ
- ಭಾಷೆಯು ಒಂದು ಕೌಶಲ
- ಭಾಷೆಯು ಆಲೋಚನೆಯ ಸಾಧನ
- ಇದು ಒಂದು ಸಂಕೇತಗಳ ವ್ಯವಸ್ಥೆ
- ಭಾಷೆಯು ಒಂದು ಸಾಮಾಜಿಕ ಕ್ರಿಯೆ
- ಭಾಷೆಯು ಒಂದು ಸಂಸ್ಕೃತಿ ವಾಹಕ
- ಸಾಮಾಜಿಕ ಸಂಪರ್ಕವೇ ಭಾಷೆಯ ಉದ್ದೇಶ
- ಭಾಷೆ ಭಾವನಾ ರೂಪಕ ಮತ್ತು ಭಾವನಾ ವಾಹಕ
- ಭಾಷಾ ಸಂಕೇತಗಳು ಮೌಖಿಕ ಧ್ವನಿ ಸಂಕೇತಗಳಾಗಿವೆ.
- ಭಾಷೆಯು ಕ್ರಮಬದ್ಧವಾಗಿ ಮತ್ತು ಅರ್ಥಪೂರ್ಣವಾಗಿರುತ್ತದೆ.
- ಭಾಷೆಯು ಸಂಕೀರ್ಣತೆಯಿಂದ ಸರಳತೆಯ ಕಡೆಗೆ ಬೆಳೆಯುತ್ತದೆ.
- ಶಬ್ದಗಳು ಕಾಲ, ದೇಶ, ಸಂಸ್ಕೃತಿಗಳಿಂದ ಅರ್ಥ ಪಡೆದುಕೊಳ್ಳುತ್ತವೆ.

Scanned with CamScanner

## ಭಾಷೆಯ ಉಗಮ ಮತ್ತು ವಿಕಾಸ

ಭಾಷೆಯ ಉಪಯೋಗ ಸಂಶೋಧನೆಯಷ್ಟು ಅದ್ಭುತ ಹಾಗೂ ಮಹತ್ವಪೂರ್ಣವಾದುದು, ಇಡೀ ಮಾನವ ಪ್ರಪಂಚದಲ್ಲಿಯೇ ಯಾವುದೂ ಇಲ್ಲವೆಂದು ವಿಕಾಸವಾದದ ಜನಕ ಚಾರ್ಲ್ಸ್ ಡಾರ್ವಿನ್ ಹೇಳಿದ್ದಾರೆ. ಭಾಷೆ ಮಾನವ ನಿರ್ಮಿತವಾದುದೆಂದು ವಿ. ಜಿ. ವಿ. **ಹರ್ಡರ್** ಹೇಳಿದ್ದಾರೆ. 18 ನೆಯ ಶತಮಾನದಲ್ಲಿ ಹರ್ಡರ್, ರೂಸ್ಸೋ, ಕಾಂಡಿಲಾಕ್ ಮುಂತಾದವರು, 19 ನೇ ಶತಮಾನದಲ್ಲಿ ಡಾರ್ವಿನ್, ಮಾರ್ಕ್ಸ್‌ಮುಲ್ಲರ್, ಸ್ಪೆನ್ಸರ್, ಟೇಲರ್, ಹಂಬೋಲ್ಟ್ ಮುಂತಾದವರು ಭಾಷೆಯ ಉಗಮದ ಬಗ್ಗೆ ಅನೇಕ ಸಿದ್ಧಾಂತಗಳನ್ನು ಮಂಡಿಸಿದ್ದಾರೆ.

## ಭಾಷೆಯ ಉಗಮದ ಸಿದ್ಧಾಂತಗಳು

- **ಭಾಷೆ ದೈವ ಮೂಲ ಸಿದ್ಧಾಂತ:** ಭಾಷೆಯು ದೇವ ನಿರ್ಮಿತವಾದುದು ಎಂದೇ ಶತ ಶತಮಾನದಿಂದಲೂ ನಂಬಲಾಗಿತ್ತು. ಪರಮಾತ್ಮನು ಪರ್ವತ, ಸಮುದ್ರವನ್ನು ಸೃಷ್ಟಿಸಿದಂತೆ ಭಾಷೆಯನ್ನೂ ಸೃಷ್ಟಿಸಿದ ಎಂಬುದು ಧರ್ಮವಾದಿಗಳ ಅಭಿಮತವಾಗಿತ್ತು.
- **ಬೈಬಲ್ ವಾದ:** ಬೈಬಲ್ ಹೇಳುವಂತೆ ಶಬ್ದವು ಮೂಲತಃ ಪರಮಾತ್ಮನಲ್ಲೇ ಇತ್ತಂತೆ. ಅನಂತರ ಪ್ರೋಮಿಥ್ಯೂಸ್ ಭೂಮಿಗೆ ಬೆಳಕನ್ನು ತಂದ ಹಾಗೆ ಶಬ್ದವೂ ಭೂಮಿಗೆ ಇಳಿಯಿತೆಂದು ನಂಬಲಾಗಿದೆ. ಹಳೆಯ ಒಡಂಬಡಿಕೆಯ ಪ್ರಕಾರ ಈ ಭೂಮಿಯ ಭಾಷಾ ವೈವಿಧ್ಯತೆಗೆ ಮನುಷ್ಯನು ಮಾಡಿದ ಪಾಪವೇ ಕಾರಣವೆಂದು ಹೇಳಲಾಗಿದೆ. ಹೀಗೆ ಭಾಷೆ ದೇವರಿಂದಲೇ ನಿರ್ಮಿತವೆಂದು ಕ್ರಿಶ್ಚಿಯನ್ನರ ಅಭಿಪ್ರಾಯ.
- **ಭಾರತೀಯರ ವಾದ:** ಭಾರತೀಯರು ಕೂಡ ಸಂಸ್ಕೃತ ಭಾಷೆಯನ್ನು ದೇವರ ಭಾಷೆಯೆಂದೇ ನಂಬಿದ್ದರು.
- **ಭಟ್ಟಾ ಕಳಂಕನ ವಾದ:** 17 ನೇ ಶತಮಾನದ ಭಟ್ಟಾಕಳಂಕನು ಜಗತ್ತಿನ ಭಾಷೆಗಳೆಲ್ಲ ದೇವರಿಂದಲೇ ಹುಟ್ಟಿವೆ ಎಂದು ವಾದಿಸಿದ್ದಾನೆ.
- **ಪ್ಲೇಟೋ ವಾದ:** ಪ್ಲೇಟೋ 'ಭಾಷೆ ಪ್ರಕೃತಿದತ್ತವಾದುದು' ಎಂದು ವಾದಿಸಿದ್ದಾನೆ.

"ಯಾವುದೇ ಮಗು ಸಾಮಾಜಿಕ ಸಂಪರ್ಕಕ್ಕೆ ಒಳಪಡದೇ ಬೆಳೆದರೆ ಆ ಮಗು ಏನನ್ನೂ ಮಾತನಾಡಲು ಸಾಧ್ಯವಿಲ್ಲ". ಆಧುನಿಕ ಭಾಷಾ ಶಾಸ್ತ್ರಜ್ಞರು ಕೂಡ ದೈವ ಮೂಲ ಸಿದ್ಧಾಂತವನ್ನು ತಿರಸ್ಕರಿಸಿದ್ದಾರೆ.

- **ಅನುಕರಣ ಸಿದ್ಧಾಂತ (Imitative Theory):** ಮನುಷ್ಯನು ಉಪಯೋಗಿಸುವ ಶಬ್ದಗಳೆಲ್ಲ ಪ್ರಾಣಿಗಳ ಧ್ವನಿಯ ಅನುಕರಣೆ. ಹೀಗಾಗಿ 'ಕಾಕಾ' ಎನ್ನುವುದರ ಮೂಲಕ ಸಂಸ್ಕೃತದ ಕಾಕವೂ, ಕನ್ನಡದ ಕಾಗೆಯೂ, ಇಂಗ್ಲಿಷ್‌ನ Crow ಶಬ್ದಗಳೂ ಹುಟ್ಟಿಕೊಂಡವು. ಈ ಸಿದ್ಧಾಂತದ ಬಗ್ಗೆ ಹಲವಾರು ವಿದ್ವಾಂಸರು ಚರ್ಚಿಸಿದ್ದಾರೆ. ಲಿಬ್ನಿಜ್ ಎಂಬ ಭಾಷಾ ವಿಜ್ಞಾನಿಯು ಈ ವಾದವನ್ನು ಪ್ರತಿಪಾದಿಸಿದ್ದಾನೆ. ಈ ಸಿದ್ಧಾಂತವನ್ನು ಮ್ಯಾಕ್ಸ್‌ಮುಲ್ಲರ್ Bow-Wow Theory ಎಂದು ಕರೆದಿದ್ದಾರೆ.
- **ಉದ್ಗಾರವಾಚಕ ಸಿದ್ಧಾಂತ (Interjectional Theory) (Pooh Pooh Theory):** ಸಂತೋಷ, ಕಷ್ಟ, ಸುಖದಂತಹ ಅತೀ ತೀಕ್ಷ್ಣವಾದ ಸಂವೇದನೆಯ ಶಾಬ್ದಿಕ ಉದ್ಗಾರವೇ ಭಾಷೆ. **ಉದಾ:** ಅಯ್ಯೋ, ಅಬ್ಬಾ, ಥೂ, ಛೇ ಛೇ, ಓ – ಇಂತಹ ಭಾವನೆಗಳ ಅಭಿವ್ಯಕ್ತಿ ಸ್ವರೂಪವನ್ನು ಅವಲೋಕಿಸಿದಾಗ ಬೇರೆ ಬೇರೆಯ ಭಾವನೆ ಅಷ್ಟೇ ಅಲ್ಲದೇ ಒಂದೊಂದು ಶಬ್ದಕ್ಕೂ ಅದರದೇ ಆದ ಅರ್ಥವಿರುತ್ತದೆ. 'ಅಬ್ಬಾ' ಎಂಬುದು ಆಶ್ಚರ್ಯಕರ ಅಭಿವ್ಯಕ್ತಿಯನ್ನು ಸೂಚಿಸಿದರೆ, 'ಛೇ ಛೆ, ಥೂ ತಥ್' ಎಂಬ ಪದ ಹೇಯಕರ, ಜಿಗುಪ್ಸೆಯ ಭಾವನೆಯನ್ನು ಸೂಚಿಸುತ್ತವೆ. ಮ್ಯಾಕ್ಸ್ ಮುಲ್ಲರ್‌ರು ಈ ಸಿದ್ಧಾಂತವನ್ನು ಪೂಹ್ ಪೂಹ್ ವಾದ ಎಂದು ಕರೆದಿದ್ದಾನೆ.
- **ನಾದ ಸಿದ್ಧಾಂತ/ ಅನುರಣನ ಸಿದ್ಧಾಂತ (Nativistic Theory):** ಒಂದು ವಸ್ತುವನ್ನು ಬಡಿದಾಗ ಅದನ್ನನುಸರಿಸಿ ಮುಂದುವರಿದ ಧ್ವನಿ. ಅಂದರೆ ಪ್ರಪಂಚದ ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಒಂದು ನಾದವಿದೆ. ಇಂತಹ ನಾದ ಅಥವಾ ಶಬ್ದವನ್ನು ಅನುಸರಿಸಿ ಭಾಷೆ ಉಗಮವಾಗಿದೆ. ಪ್ಲೇಟೋ ಈ ಸಿದ್ಧಾಂತವನ್ನು ಮೊದಲು ಜಾರಿಗೆ ತಂದ. ಮ್ಯಾಕ್ಸ್‌ಮುಲ್ಲರ್ ಈ ಸಿದ್ಧಾಂತವನ್ನು ಪ್ರತಿಪಾದಿಸಿದನು. ಇವನ ಪ್ರಕಾರ ಮಾತನಾಡುವ ಮನುಷ್ಯ ಜೀವಿಯ ಆತ್ಮವು ಈ ನಾಟಕಕ್ಕೆ ಅಭಿವ್ಯಕ್ತಕೊಡುವುದೇ ಭಾಷೆ. ಇದನ್ನು Ding Dong Theory ಎಂದು ಕರೆಯುತ್ತಾರೆ.
- **ಶ್ರಮ ಪರಿಹಾರ ಸಿದ್ಧಾಂತ (Yo- He- Ho- Theory):** Noire ಈ ಸಿದ್ಧಾಂತವನ್ನು ಪ್ರತಿಪಾದಿಸಿದ. ಶ್ರಮ ಜೀವಿ ಮನುಷ್ಯ ಕಾಯಕ ಮಾಡುವಾಗ ತನ್ನ ಶ್ರಮದ (ಆಯಾಸದ) ಪರಿಹಾರಕ್ಕಾಗಿ ಉಸಿರನ್ನೂ ಹಾಗೂ ಅದರೊಂದಿಗೆ ಹೊರಡುವ ಧ್ವನಿಯನ್ನು ಹೊರಬಿಡುತ್ತಾನೆ. ಪರಿಣಾಮ ಈ ರೀತಿ ಮಾಡುವ ಸಪ್ಪಳ ಕ್ರಮೇಣ ಆ ಮಾತಿನ ಕ್ರಿಯೆಯನ್ನು ಸೂಚಿಸುತ್ತದೆ. ಉದಾಃ : ಆಹ್, ಉಶ್, ಅಬ್ಬಾ, ಹೂಂ, ಹೀಗೆ ಹಲವಾರು ಶಬ್ದಗಳು ವ್ಯಕ್ತಿಯ ದೇಹದ ಒಳಗಿಂದ ಹೊರಟು ಭಾಷೆಯಾಗಿ ಜನ್ಮ ತಾಳಿತು ಎಂದು ಹಲವರು ಈ ಸಿದ್ಧಾಂತವನ್ನು ಸಮರ್ಥಿಸಿದರು. ಆದರೆ ಶ್ರಮಜೀವಿಯಾಗಿರುವ ಮನುಷ್ಯ ತನ್ನ ಹೊಟ್ಟೆಪಾಡಿಗಾಗಿ ಕೆಲಸ ಮಾಡುತ್ತಾನೆಂದ ಮಾತ್ರಕ್ಕೆ ಭಾಷೆ ಉಗಮಕ್ಕೂ ಆ ಪ್ರಕ್ರಿಯೆಗೂ ಹೋಲಿಕೆ ನೀಡುವುದು ಸಮಂಜಸವಲ್ಲ ಎಂದು ಒಟ್ಟೋಯೇಸ್ಪರ್ಸನ್, ಎ. ಎಸ್. ಡೈಮೆಂಡ್ ಈ ಸಿದ್ಧಾಂತವನ್ನು ಟೀಕಿಸಿದ್ದಾರೆ.

### ಇತರೆ ಸಿದ್ಧಾಂತಗಳು/ ವಾದಗಳು

- ಸಂಜ್ಞಾವಾದ –ವುಂಡ್ತ
- ತೊದಲ್ನುಡಿವಾದ–ಯೆಸ್ಪೆರಸನ್
- ವಂಶವೃಕ್ಷವಾದ
- ಟಾಟಾವಾದ
- ತರಂಗವಾದ
- ಸಂಗೀತವಾದ
- ಸ್ವೀಕಾರವಾದ
- ಸಂಪರ್ಕವಾದ
- ಇಂಗಿತವಾದ

## ಭಾಷೆಯ ಪ್ರಯೋಜನಗಳು

'ಭಾಷೆ ಎಂಬ ಜ್ಯೋತಿ ನಮ್ಮ ಬದುಕನ್ನು ಬೆಳಗದಿದ್ದರೆ ಇಡೀ ವಿಶ್ವವೇ ಅದಮ್ಯ ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗುತ್ತಿತ್ತು' ಎಂಬ ಸಂಸ್ಕೃತದ ಕವಿ 'ದಂಡಿ'ಯ ನುಡಿ ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಭಾಷೆ ಎಂಬುದು ಎಷ್ಟು ಮಹತ್ವದ ಪಾತ್ರ ವಹಿಸುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಭಾಷೆಯ ಉಪಯೋಗ ಅಮೋಘವಾದುದು.

### ಪ್ರಯೋಜನಗಳು



- ಭಾಷೆ ಸಂಪರ್ಕ ಸಾಧನವಾಗಿದೆ.
- ಭಾಷೆ ವಿಚಾರವನ್ನು ಅಭಿವ್ಯಕ್ತಗೊಳಿಸುವ ಸಾಧನವಾಗಿದೆ.
- ಭಾಷೆಯಿಂದ ಅನುಭವ ವಿಕಾಸಗೊಳ್ಳುತ್ತದೆ.
- ಪ್ರತಿಯೊಂದು ಭಾಷೆ ತನ್ನದೇ ಆದ ಒಂದು ಪ್ರತ್ಯೇಕ ನುಡಿ ಮತ್ತು ಸಮಾಜವನ್ನು ನಿರ್ಮಿಸುತ್ತದೆ.
- ಮನುಕುಲದ ಅವಿಭಾಜ್ಯ ಅಂಗವಾಗಿದೆ.
- ಸಮಾಜದಲ್ಲಿ ಬಡವ– ಬಲ್ಲಿದ, ಮೇಲು–ಕೀಳು, ನಾಗರಿಕ– ಅನಾಗರಿಕ ಎಂಬ ಬೇಧ–ಭಾವವಿಲ್ಲದೇ ಜನರ ಮಧ್ಯೆ ಬಳಕೆಗೊಳ್ಳುತ್ತವೆ.
- ಭಾಷೆ ವ್ಯಕ್ತಿಗೆ ವ್ಯವಹಾರ ಜ್ಞಾನ ಮತ್ತು ಕುಶಲತೆಯನ್ನು ಒದಗಿಸುತ್ತದೆ.
- ಮನುಷ್ಯನ ಜೀವನದೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ.

Scanned with CamScanner

## ಧ್ವನಿ

7019177433.

**ಧ್ವನಿಯ ಉತ್ಪತ್ತಿ**: 'ಅನುಕೂಲ ಪವನನಿಂಜೀ ವನಿಷ್ಪದಿಂ ನಾಭಿಮೂಲದೊಳ್ ಕಹಳೆಯ ಪಾಂಗಿನವೊಲ್ ಶಬ್ದ ದ್ರವ್ಯಂ' ಎಂದು ಹಳಗನ್ನಡದ ವೈಯಾಕರಣಿ ಕೇಶಿರಾಜ ಹೇಳಿದಂತೆ ಬಾಯಲ್ಲಿ ಉಸಿರುಗಟ್ಟಿ ನಮಗೆ ಬೇಕಾದ ಹಾಗೆ ತಿರುಗಿಸಿ ನಾವು ಇಚ್ಛೆಪಟ್ಟಂತಹ ಧ್ವನಿಗಳನ್ನು ಪಾಲಿಸುವುದು.

### ಧ್ವನ್ಯಂಗಗಳು

| ಕರಣ | ಸ್ಥಾನ | ಕರಣ | ಸ್ಥಾನ |
|---|---|---|---|
| ಕೆಳದುಟಿ | ಮೇಲ್ದುಟಿ | ಜಿಹ್ವಾಗ್ರ | ಮೇಲ್ದಂತ |
| ಜಿಹ್ವ ಮಧ್ಯ | ವರ್ತ್ಸ್ಯ | ಜಿಹ್ವ ಮೂಲ | ಕಠಿಣ ತಾಲು |
| ಧ್ವನಿ ಪಟಲ | ಮೃದು ತಾಲು | ಕಿರುನಾಲಿಗೆ | ಗಲಕುಹರ |

- ಕೆಳದುಟಿ + ಮೇಲ್ದುಟಿ – ಪ್, ಬ್, ಮ್, ವ್ (ಉಭಯೋಷ್ಠ ಧ್ವನಿ)
- ಕೆಳದುಟಿ + ಮೇಲ್ದಂತ – ದಂತ್ಯೋಷ್ಠ್ಯ ಧ್ವನಿ (ಫ್, ವ್)
- ತುಟಿಗಳು ದುಂಡಾಗಿ ತಿರುಗಿ ಉಂಟಾದ ಸ್ವರಗಳು **ಸವೃತ್ತ ಸ್ವರಗಳು**– ಉ, ಊ, ಒ, ಓ.
- ತುಟಿಗಳು ದುಂಡಾಗದೇ ಅವುಗಳ ಹರಡಿಕೆಯಿಂದ ಆದ ಸ್ವರ– **ಅವೃತ್ತ ಸ್ವರ** – ಇ, ಈ, ಎ, ಏ.
- ಉಭಯೋಷ್ಠ್ಯಗಳಿಂದಾದ ಅರೆ ವ್ಯಂಜನ – 'ವ್'

| ಅಂಗ | ಉಚ್ಚಾರ |
|---|---|
| ನಾಲಿಗೆ ತುದಿ (ಜಿಹ್ವಾಗ್ರ) ಮೇಲ್ದಂತ ಸ್ಪರ್ಶ | – ತ್, ದ್, ನ್ |
| ಮೇಲ್ದಂತ ಹಿಂಭಾಗದ ವಸಡಿನ ಭಾಗಕ್ಕೆ ತಲುಪಿ ಉಸಿರುತಡೆದು ಬರುವ ವರ್ತ್ಸ್ಯ ಧ್ವನಿಗಳು | –ತ್, ದ್, ನ್, ಲ್, ರ್. |
| ವರ್ತ್ಸ್ಯದ ಹಿಂದಿರುವ ಕಠಿಣ ಭಾಗಕ್ಕೆ ತಲುಪಿ ಉಸಿರು ತಡೆದು ಬರುವ ಧ್ವನಿ– ಪರಿವೇಷ್ಠಿತ ಧ್ವನಿ | – ಟ್, ಡ್, ಣ್, ಳ್. |
| ಜಿಹ್ವಾಮಧ್ಯ ಕಠಿಣ ತಾಲು ಸ್ಪರ್ಶಿಸಿ ತಾಲವ್ಯಧ್ವನಿ ಉಂಟುಮಾಡುತ್ತದೆ | –ಚ್, ಜ್, ಞ್, ಶ್, ಯ್ |
| ಜಿಹ್ವಾಮೂಲ ತನ್ನ ಅಭಿಮುಖದಲ್ಲಿರುವ ಮೃದು ತಾಲವನ್ನು ತಲುಪಿ ಕಂಠ್ಯ ಧ್ವನಿಗಳನ್ನು ಹೊರಡಿಸುತ್ತದೆ. | – ಕ್, ಗ್, ಙ್. |
| **ಮೇಲ್ದಂತ** : ಮೇಲ್ಭಾಗದ ಮುಂದಿನ ಏಳೆಂಟು ಹಲ್ಲುಗಳನ್ನು ಕೆಳತುಟಿಗೆ ಸ್ಪರ್ಶಿಸಿ ಹವೆ ತಡೆಹಿಡಿದು ಘರ್ಷಣೆಯೊಂದಿಗೆ ಸಾಗಿ ಉಂಟಾಗುವ ಧ್ವನಿಗಳು ದಂತ್ಯೋಷ್ಠ್ಯ ಧ್ವನಿಗಳು | –ಫ್, ವ್. |
| ಜಿಹ್ವಾಗ್ರ + ಮೇಲ್ದಂತದ ಹಿಂಭಾಗ – ದಂತ್ಯಧ್ವನಿ | – ತ್, ದ್, ನ್. |

1) **ಓಷ್ಠ್ಯ**: ಕೆಳದುಟಿ ಮೇಲ್ದುಟಿಯನ್ನು ಸ್ಪರ್ಶಿಸುವುದರಿಂದ ಮತ್ತು ಕೆಳದುಟಿ ಮೇಲ್ದಂತವನ್ನು ಸ್ಪರ್ಶಿಸುವುದರಿಂದ ವಿಭಿನ್ನ ಧ್ವನಿಗಳನ್ನು ಉತ್ಪಾದಿಸಬಹುದು.
2) **ದಂತಗಳು (Teeth)**: ದಂತಗಳಿಗೆ ತುಟಿಗಳ ಸ್ಪರ್ಶದಿಂದ, ನಾಲಿಗೆಯ ಸ್ಪರ್ಶದಿಂದ ಹಲವು ಧ್ವನಿಗಳು ಉಂಟಾಗುತ್ತವೆ.
3) **ವರ್ತ್ಸ್ಯ (Alveolus)**: ನಾಲಿಗೆಯ ತುದಿಯು ದಂತದ ಹಿಂಭಾಗವಾದ ವರ್ತ್ಸ್ಯ ಸ್ಥಾನವನ್ನು ಕೆಲವು ವೇಳೆ ಸ್ಪರ್ಶಿಸುತ್ತ ಮತ್ತೆ ಕೆಲವು ವೇಳೆ ಪರಸ್ಪರ ಸಮೀಪಕ್ಕೆ ಬಂದು ಬಗೆಬಗೆಯ ವರ್ತ್ಸ್ಯ ಧ್ವನಿಗಳು ಹುಟ್ಟುತ್ತವೆ. ಬಾಯಿಯ ಮೇಲ್ಭಾಗದಲ್ಲಿ ಮೇಲ್ದಂತದ ಹಿಂಭಾಗಕ್ಕೆ ಹೊಂದಿಕೊಂಡಂತೆ ಕಠಿಣ ತಾಲುವಿನ ಮುಂಭಾಗದಲ್ಲಿ ಇದನ್ನು ಕಾಣಬಹುದು.
4) **ತಾಲು (Paletes)**: ನಾಲಗೆಯ ತುದಿಯು ತಾಲುವಿಗೆ ಸ್ಪರ್ಶಿಸಿ ಉಸಿರಿಗೆ ತಡೆಯೊಡ್ಡಿದಾಗ ವಿವಿಧ ಧ್ವನಿಗಳು ಹುಟ್ಟುತ್ತವೆ. ಬಾಯಿಯ ಮೇಲ್ಭಾಗದಲ್ಲಿ ವರ್ತ್ಸ್ಯಕ್ಕೆ ಹೊಂದಿಕೊಂಡಂತೆ ಹತ್ತಿರ ಹತ್ತಿರ ಗಂಟಲಿನವರೆಗೆ ಚಾಚಿಕೊಂಡಿರುವ ಭಾಗವೇ ತಾಲು. ಇದನ್ನು ಕಠಿಣ ತಾಲು, ಮಧ್ಯತಾಲು ಹಾಗೂ ಮೃದು ತಾಲು ಎಂದು ಭಾಗ ಮಾಡಬಹುದು.



5) **ಮೂರ್ಧನ್ಯ (Cerebrum)**: ಮೂರ್ಧ ಭಾಗವು ನಾಲಿಗೆಯ ತುದಿ ಸ್ಪರ್ಶಿಸುವುದರಿಂದ ಮೂರ್ಧನ್ಯ ಧ್ವನಿಗಳು ಉತ್ಪತ್ತಿಯಾಗುತ್ತವೆ. ಇದು ಬಾಯಿಯ ಮೇಲಿನ ಮಧ್ಯ ಭಾಗ ಅಂದರೆ ನೆತ್ತಿಯ ನೇರ ಕೆಳ ಭಾಗ. ಇದು ಕಠಿಣ ತಾಲು ಮತ್ತು ಮಧ್ಯ ತಾಲು ನಡುವೆ ಕಂಡು ಬರುವ ಭಾಗ.
6) **ಅಲಿಜಿಹ್ವೆ (Uvula)**: ಗಂಟಲಿನಲ್ಲಿ ಮೇಲಿನಿಂದ ನೇತಾಡುವ ಒಂದು ತುಂಡು. ಕಿರುನಾಲಿಗೆ ಎಂದು ಕರೆಯುತ್ತಾರೆ.
7) **ಜಿಹ್ವೆ (Tongue)**: ನಾಲಿಗೆಯು ಬಾಯಿಯ ಮೇಲ್ಭಾಗದ ದಂತದಿಂದ ಹಿಡಿದು ತಾಲುವಿನ ಅಂತ್ಯದವರೆಗೂ ಬೇರೆ ಬೇರೆ ಧ್ವನಿಗಳನ್ನು ಉತ್ಪಾದಿಸುತ್ತದೆ. ವರ್ತ್ಸ್ಯ ಮತ್ತು ತಾಲುಗಳ ಕೆಳಭಾಗದಲ್ಲಿ ಕೆಳಭಾಗದ ಹಲ್ಲಿನ ಸ್ವಲ್ಪ ಹಿಂದಕ್ಕೆ ಇರುವ ಭಾಗವೇ ಜಿಹ್ವೆ ಅಥವಾ ನಾಲಗೆ.

■ **ಧ್ವನಿ ಉಚ್ಚಾರಣಾ ದೋಷ**: ಮಗು ಬೆಳೆಯುತ್ತ ಬೆಳೆಯುತ್ತ ತನ್ನದೇ ಆದ ಉಚ್ಚಾರಣಾ ಶೈಲಿಯಲ್ಲಿ ಮಾತನಾಡುತ್ತದೆ. ಅಲ್ಲಿ ಕಂಡುಬರುವ ದೋಷಗಳನ್ನು ತಿದ್ದದೇ ಹೋದಲ್ಲಿ ಅದೇ ದೋಷವೇ ಮುಂದುವರಿದು ಉಚ್ಚಾರಣಾ ದೋಷವೊಂದು ಮಗುವಿಗೆ ಸಮಸ್ಯಾತ್ಮಕವಾಗಿ ಪರಿಣಮಿಸುತ್ತದೆ.

### ಉಚ್ಚಾರಣಾ ದೋಷಕ್ಕೆ ಕಾರಣಗಳು:

- ಮೆದುಳಿನಲ್ಲಿ ಕಂಡುಬರುವ ನ್ಯೂನತೆಗಳು ಕೂಡಾ ಮಕ್ಕಳಲ್ಲಿ ಉಚ್ಚಾರಣಾ ಸ್ಪಷ್ಟತೆಗೆ ತಡೆಯೊಡ್ಡುತ್ತವೆ.
- ಕಣ್ಣಲ್ಲಿ ದೋಷ, ಸೀಳುದುಟಿ, ನಾಲಿಗೆಯ ದೋಷ, ಮೂಗಿನ ತೊಂದರೆ, ಶ್ರವಣದೋಷ, ಶ್ವಾಸೋಚ್ಛ್ವಾಸದ ತೊಂದರೆಗಳು, ಹಲ್ಲಿನ ರಚನೆ ಮೊದಲಾದವುಗಳಿಂದ ಧ್ವನಿ ಮತ್ತು ಉಚ್ಚಾರದಲ್ಲಿ ದೋಷಗಳು ಕಂಡುಬರುತ್ತವೆ.
- ಕರ್ಕಶ ಧ್ವನಿ, ಪಿಸು ಧ್ವನಿ, ಕೀರಲು ಧ್ವನಿ, ಸೀಳು ಧ್ವನಿ ಬರುತ್ತವೆ. ಈ ಧ್ವನ್ಯಂಗಗಳು ಘಾಸಿಗೊಂಡಾಗ ಮತ್ತು ಸಾಮರಸ್ಯ ತಪ್ಪಿದಾಗ ಮಾತಿನಲ್ಲಿ ದೋಷ ಕಂಡುಬರುತ್ತದೆ.

### ನಿವಾರಣೋಪಾಯಗಳು

- ಉಚ್ಚಾರಣಾ ದೋಷವುಳ್ಳ ಮಕ್ಕಳನ್ನು ಗುರುತಿಸಿ ಅವರಿಗೆ ಶ್ರವಣ ಅಂಗಗಳಿಗೆ ತರಬೇತಿ ನೀಡಿ, ಶ್ರವಣ ಸಾಧನಗಳನ್ನು ನೀಡಬೇಕು.
- ಧ್ವನ್ಯಂಗಗಳಲ್ಲಿ ಸುವ್ಯವಸ್ಥಿತ ಸಾಮರಸ್ಯ ಉಂಟಾಗುವಂತೆ ತರಬೇತಿ ನೀಡಬೇಕು. ಶಿಕ್ಷಕ ಧ್ವನಿಯಲ್ಲಿ ಏರಿಳಿತ ಸಾಧಿಸಿ ಪಾಠ ಬೋಧನೆ ಮಾಡಬೇಕು.
- ಮಗುವಿಗೆ ಅತ್ಯಂತ ಕಠಿಣ ಎನಿಸುವ ಶಬ್ದಗಳ ಉಚ್ಚಾರಣೆಯನ್ನು ಅದು ವ್ಯವಸ್ಥಿತವಾಗಿ ಉಚ್ಚಾರ ಮಾಡುವವರೆಗೂ ಪುನರುಚ್ಚರಿಸಬೇಕು.
- ಅಂಗಗಳ ರಚನೆಯಲ್ಲಿ ದೋಷ ಕಂಡುಬಂದಿದ್ದರೆ, ಅಗತ್ಯ ಕಂಡಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸಬೇಕು.

Scanned with CamScanner

# ಮಾತೃಭಾಷೆ (Mother Tongue)

## ಮಾತೃಭಾಷೆಯ ಅರ್ಥ ಮತ್ತು ವ್ಯಾಖ್ಯೆ

ಮಗುವು ತಾನು ಹುಟ್ಟಿ ಬೆಳೆಯುವ ಪರಿಸರದಲ್ಲಿ ಬಳಕೆಯಿರುವ ಭಾಷೆಯನ್ನು ಸ್ವಾಭಾವಿಕವಾಗಿ ಕಲಿಯುತ್ತದೆ. ಮಾತೃಭಾಷೆ ಎಂದರೆ ಮಗು ತಾನು ಹುಟ್ಟಿದ ಮನೆಯಲ್ಲಿ ಬೆಳೆಯುವ ಪರಿಸರದಲ್ಲಿ ಕಲಿಯುತ್ತದೆ. ಮನೆಯಲ್ಲಿ ತಾಯಿಯಿಂದ ಕಲಿಯುತ್ತದೆ. ಆದ್ದರಿಂದ ಇದನ್ನು ಮಾತೃಭಾಷೆ ಎಂದು ಕರೆಯುತ್ತಾರೆ. ಭಾಷೆ ಎರಡು ರೀತಿಯದ್ದಾಗಿರುತ್ತದೆ. ಒಂದು ಮೂರ್ತ, ಮತ್ತೊಂದು ಅಮೂರ್ತ ಲಿಪಿ ಸಂಕೇತವನ್ನು ಹೊಂದಿರುವುದು ಮೂರ್ತ. ಇದು ಬರವಣಿಗೆಯಲ್ಲಿ ವ್ಯಕ್ತವಾಗುತ್ತದೆ. ಸಂಕೇತವಿಲ್ಲದೆ ಬಾಯಿ ಮಾತಿನಿಂದ ಅಂದರೆ ಅಮೂರ್ತ ಅರ್ಥಪೂರ್ಣ ಶಬ್ದಗಳಿಂದ ವ್ಯಕ್ತವಾಗುವುದು.

ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಭಾವನಾತ್ಮಕ ವಿಕಾಸಕ್ಕೆ ಆತನ ಮಾತೃ ಭಾಷೆಯು ಹಲವು ತೆರನಾಗಿ ಸಹಾಯಕವಾಗುತ್ತದೆ.

### ಪ್ರಸಿದ್ಧ ಹೇಳಿಕೆಗಳು

- **ಗೋವಿಂದ ಪೈ–** "ತಾಯ್ನುಡಿಯಿಂದ ಕಲಿತ ವಿದ್ಯೆ ನಿಜವಾದ ವಿದ್ಯೆ. ಪರರೆಂಜಲು ಯಾವಾಗಲೂ ಸವಿಯಲ್ಲ. ಭಾಷೆ ಭಾವವಾಹಕವೂ ಮತ್ತು ಭಾವಪೋಷಕವೂ ಆಗಿರುವುದರಿಂದ ಮನುಷ್ಯನ ಅನಿಸಿಕೆಗಳನ್ನು ವ್ಯಕ್ತಪಡಿಸಲು ಸಹಾಯಕವಾಗುತ್ತದೆ"
- **ಮಹಾತ್ಮಾ ಗಾಂಧೀಜಿ–**"ನನ್ನ ಮಾತೃಭಾಷೆಯಲ್ಲಿ ಏನೇ ದೋಷಗಳಿದ್ದರೂ ಕೂಡ, ತಾಯಿಯ ಮೊಲೆ ಹಾಲಿಗೆ ಮಗು ಅಂಟಿಕೊಳ್ಳುವಂತೆ ಅಂಟಿಕೊಳ್ಳುತ್ತೇನೆ. ಅದೊಂದು ತಾಯಿಯ ಮೊಲೆ ಹಾಲಿನಂತೆ ಜೀವ ತುಂಬಬಲ್ಲದು."
- **ರವೀಂದ್ರನಾಥ ಠಾಗೋರ್–** "ಮಾತೃಭಾಷೆಯ ಮಾಧ್ಯಮವಿಲ್ಲದಿದ್ದರೆ ಸಂತೋಷವಿಲ್ಲ, ವಿಸ್ತರಣೆಯಿಲ್ಲ, ಮಾನಸಿಕ ಶಾಖೆಗಳು ಬೆಳಕಿಗೆ ಬರುವುದು ಸಾಧ್ಯವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ".

### ಕನ್ನಡ ಉಪಭಾಷೆಗಳು

ಕನ್ನಡ ಕರ್ನಾಟಕದ ಅಧಿಕೃತ ಭಾಷೆಯಾಗಿದೆ. ಆದರೂ, ಮೈಸೂರು, ಮಂಗಳೂರು, ಗುಲ್ಬರ್ಗಾ, ಧಾರವಾಡ ಪ್ರದೇಶಗಳಲ್ಲಿ ಆಡುವ ಭಾಷೆಗಳಲ್ಲಿ ವ್ಯತ್ಯಾಸವನ್ನು ಕಾಣಬಹುದಾಗಿದೆ. ಸಾಂಸ್ಕೃತಿಕ, ಸಾಮಾಜಿಕ, ಭೌಗೋಳಿಕವಾಗಿ ಪ್ರತಿ 40–45 ಕಿ.ಮೀ. ಗೆ ಒಂದು ಭಾಷೆಯ ಪದಗಳು, ಉಚ್ಚಾರಶೈಲಿಯಲ್ಲಿ ವ್ಯತ್ಯಾಸಗಳನ್ನು ಭಾಷಾಶಾಸ್ತ್ರಜ್ಞರು ಗುರುತಿಸಿದ್ದಾರೆ. ಒಕ್ಕಲಿಗರು, ಲಿಂಗಾಯಿತರು, ಬ್ರಾಹ್ಮಣರು, ಮುಸಲ್ಮಾನರು, ಕಂಬಾರರು, ಕೊರಚರು ಹಾಗೂ ಯಾದವರು ಮಾತನಾಡುವ ಕನ್ನಡದಲ್ಲಿ ವ್ಯತ್ಯಾಸವನ್ನು ಗುರುತಿಸಬಹುದು.

### ಸಾಮಾಜಿಕ ಉಪಭಾಷೆಗಳು

ಸೋಲಿಗ ಕನ್ನಡ, ಬಡಗ ಕನ್ನಡ, ಧಿವರ ಕನ್ನಡ, ಬಂಟ ಕನ್ನಡ, ಹವ್ಯಕ ಕನ್ನಡ, ಮುಸ್ಲಿಂ ಕನ್ನಡ, ಹಾಲಕ್ಕಿ ಕನ್ನಡ, ಕೊಡವ ಕನ್ನಡ, ಕೋಟ್ಯಾ ಕನ್ನಡ, ಕೊರವ/ ಕೊರಚ ಕನ್ನಡ, ಗೌಡ ಕನ್ನಡ.

ಕನ್ನಡ ಭಾಷೆಯ ಪ್ರಾಚೀನತೆಯನ್ನು ಕ್ರಿ.ಶ. 450ರ ಹಲ್ಮಿಡಿ ಶಾಸನದಲ್ಲಿಯೇ ಗುರುತಿಸಲಾಗಿದೆ. 10ನೇ ಶತಮಾನದ ಆದಿಕವಿ ಪಂಪನಿಂದ ಹಿಡಿದು ಇಂದಿನವರೆಗೂ ಪೂರ್ವದ ಹಳಗನ್ನಡ (ಪಂಪಪೂರ್ವ), ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡಗಳೆಂಬ ಘಟ್ಟಗಳಲ್ಲಿ ಕಾವ್ಯ, ಕಾದಂಬರಿ, ನಾಟಕ, ಕತೆ, ವಚನ ಮುಂತಾದ ರೂಪಗಳಲ್ಲಿ ಸಾಹಿತ್ಯ ಮೈದಾಳಿರುವುದನ್ನು ಕಾಣುತ್ತೇವೆ. ಹೊಸಗನ್ನಡದಲ್ಲೇ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ (ದಲಿತ–ಬಂಡಾಯ)ಗಳೆಂಬ ಪಂಥಗಳಲ್ಲಿ ಸಾಹಿತ್ಯವನ್ನು ಗುರುತಿಸುತ್ತಿದ್ದಾರೆ.

## ಮಾತೃ ಭಾಷಾ ಬೋಧನೆಯ ಉದ್ದೇಶಗಳು



- ಮಕ್ಕಳಲ್ಲಿ ಆಲಿಸುವ, ಗ್ರಹಿಸುವ ಮತ್ತು ವೇಗವಾಗಿ ಓದುವ ಸಾಮರ್ಥ್ಯವನ್ನು ಬೆಳೆಸುವುದು.
- ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿಯ ಸಾಮರ್ಥ್ಯ ಬೆಳೆಸುವುದು.
- ಜ್ಞಾನಾರ್ಜನೆ, ಸಾಹಿತ್ಯಾಭಿರುಚಿ, ಅಂತರ್ದೃಷ್ಟಿ ಮತ್ತು ಆನಂದಕ್ಕಾಗಿ ಮಕ್ಕಳು ಸ್ವತಂತ್ರವಾಗಿ ಓದಲು ಸಮರ್ಥವಾಗುವಂತೆ ಮಾಡುವುದು.
- ವಾಕ್ಯಬಂಧಗಳನ್ನು ಅರ್ಥಮಾಡಿಕೊಂಡು, ಪದ ಸಂಪತ್ತನ್ನು ವೃದ್ಧಿಸಿಕೊಂಡು ಮತ್ತು ಉಚ್ಚಾರಣೆಯನ್ನು ಸ್ಪಷ್ಟಗೊಳಿಸಿಕೊಂಡು ಭಾಷೆಯನ್ನು ದೋಷರಹಿತವಾಗಿ, ನಿಖರವಾಗಿ, ಪರಿಣಾಮಕಾರಿಯಾಗಿ ಬಳಸುವ ಸಾಮರ್ಥ್ಯವನ್ನು ಹೆಚ್ಚಿಸುವುದು. ಸೌಂದರ್ಯ ಪ್ರಜ್ಞೆ, ಸ್ವಂತಿಕೆ, ಕಲ್ಪನೆ ಮತ್ತು ಸೃಜನಾತ್ಮಕ ಶಕ್ತಿಯನ್ನು ಬೆಳೆಸುವುದು.
- ಮಾತೃಭಾಷೆಯಲ್ಲಿನ ಪ್ರಮುಖರು ಹಾಗೂ ಗ್ರಂಥಕರ್ತರ ಪರಿಚಯವಾಗುವ ರೀತಿಯಲ್ಲಿ ಸಾಹಿತ್ಯದ ಮುಖ್ಯ ಪ್ರಕಾರಗಳನ್ನು ಮತ್ತು ವ್ಯಾಕರಣವನ್ನು ಪರಿಚಯ ಮಾಡಿಕೊಡುವುದು.
- ಬರವಣಿಗೆಯ ತಂತ್ರದಲ್ಲಿ ಪರಿಪೂರ್ಣತೆಯನ್ನು ತರುವುದು ಮತ್ತು ವೇಗವಾಗಿ, ಕರಾರುವಾಕ್ಕಾಗಿ ಬರೆಯುವ ಸಾಮರ್ಥ್ಯವನ್ನು ಮೂಡಿಸುವುದು.

## ಮಾತೃ ಭಾಷೆಯ ಮಹತ್ವ

- ಭಾಷೆಯು ಸಾಮಾಜಿಕ ಸಂಪರ್ಕ ಮಾಧ್ಯಮವಾಗಿದೆ.
- ಮಾನವ ತನ್ನ ಇಂಗಿತ ವ್ಯಕ್ತಪಡಿಸಲು, ತನ್ನ ಅವಶ್ಯಕತೆ ಪೂರೈಸಿ ಕೊಳ್ಳಲು, ಸಮಾಜದೊಂದಿಗೆ, ಸಾಮಾಜಿಕ ಸಂಸ್ಥೆಗಳೊಂದಿಗೆ ಸಕ್ರಿಯವಾಗಿ ಪಾಲ್ಗೊಳ್ಳಲು, ವ್ಯವಹರಿಸಲು ಪ್ರಮುಖ ಪಾತ್ರ ವಹಿಸುತ್ತದೆ.
- ಆಧುನಿಕ ಯುಗದ ಸಾಮಾಜಿಕ, ಶೈಕ್ಷಣಿಕ, ಆಡಳಿತ, ರಾಜಕೀಯ, ಆರ್ಥಿಕ ಹೀಗೆ ಎಲ್ಲ ರಂಗಗಳಲ್ಲೂ ಭಾಷೆಯೇ ಪ್ರಧಾನ ಮಾಧ್ಯಮವಾಗಿದೆ.
- ಭಾಷೆಯು ಶಿಕ್ಷಣ, ಸಾಹಿತ್ಯ ಹಾಗೂ ಸಂಸ್ಕೃತಿಗಳಿಗೆ ಪರಸ್ಪರ ಪೂರಕ ಹಾಗೂ ಪೋಷಕ. ಭಾಷೆಯು ಕಠಿಣತೆಯಿಂದ ಸರಳತೆಯ ಕಡೆಗೆ ಬೆಳೆಯುತ್ತಾ ಸಾಗುತ್ತದೆ. ಭಾಷೆಯು ಸುವ್ಯವಸ್ಥಿತ, ಕ್ರಮಾನುಗತ, ಅರ್ಥಪೂರ್ಣವೂ ಆಗಿದೆ. ಭಾಷೆಯು ಭಾವನೆಗಳ ನಿರೂಪಕ ಹಾಗೂ ವಾಹಕವಾಗಿಯೂ ಪಾತ್ರ ನಿರ್ವಹಿಸುತ್ತದೆ.

### ಮಾತೃಭಾಷೆಯ ಪ್ರಯೋಜನಗಳು

- ಅದು ಕಲಿಕೆ ಮತ್ತು ಬೋಧನೆಯನ್ನು ಸುಲಭಗೊಳಿಸುತ್ತದೆ.
- ಮಕ್ಕಳ ಬೌದ್ಧಿಕ, ಮಾನಸಿಕ ಮತ್ತು ಸಂವೇಗಾತ್ಮಕ ಬೆಳವಣಿಗೆಗೆ ಹೆಚ್ಚು ಸಹಾಯಕ. ಮಾತೃಭಾಷಾ ಮಾಧ್ಯಮವು ಸಂವೇಗಾತ್ಮಕ ಮತ್ತು ರಾಷ್ಟ್ರದ ಸಂಪ್ರದಾಯದ ಪ್ರಕ್ರಿಯೆಯನ್ನು ಉತ್ತಮಪಡಿಸುತ್ತದೆ.
- ಕಲಿಕೆ ಮತ್ತು ಬೋಧನೆಯಲ್ಲಿ ಕಂಠಸ್ಥತಿಯ ತೊಂದರೆಯನ್ನು ಕಡಿಮೆಗೊಳಿಸುತ್ತದೆ. ಮಕ್ಕಳು ತಮ್ಮ ವಿಚಾರಗಳನ್ನು ಆತ್ಮವಿಶ್ವಾಸದಿಂದ ನಿಷ್ಕರ್ಷೆಯ ರೀತಿಯಲ್ಲಿ ವ್ಯಕ್ತಪಡಿಸುವಲ್ಲಿ ಸಮರ್ಥರಾಗುತ್ತಾರೆ.
- ರಾಷ್ಟ್ರೀಯ ಐಕ್ಯತೆ ಮತ್ತು ಭಾವೈಕ್ಯತೆಯ ಸಮಿತಿಯೂ ಸಹ ಮಗುವಿನ ಪ್ರಾದೇಶಿಕ ಭಾಷೆಯೇ ಬೋಧನಾ ಮಾಧ್ಯಮವಾಗಿರಬೇಕೆಂಬ ವಾದವನ್ನು ಸಮರ್ಥಿಸಿದೆ.

Scanned with CamScanner

# ಶಿಕ್ಷಣದಲ್ಲಿ ಭಾಷಾ ನೀತಿಗಳು (Language Policies in Education)

## ತ್ರಿಭಾಷಾ ಸೂತ್ರ

ನಮ್ಮ ದೇಶದಲ್ಲಿರುವ ಭಾಷಾ ಸಮಸ್ಯೆಯನ್ನು ಇತ್ಯರ್ಥಪಡಿಸಲು ಹಾಗೂ ಇನ್ನಿತರ ಕಾರಣಗಳಿಂದ 1956ರಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಿ 15 ಭಾಷೆಗಳನ್ನು ಭಾರತದ ಅಧಿಕೃತ ಭಾಷೆಗಳನ್ನಾಗಿ ಮಾನ್ಯ ಮಾಡಲಾಯಿತು. ಹಿಂದಿಯನ್ನು ಭಾರತ ಒಕ್ಕೂಟದ ಅಧಿಕೃತ ಸಂಪರ್ಕ ಭಾಷೆಯನ್ನಾಗಿ ಮಾಡಲಾಯಿತು.

ಸಂವಿಧಾನವು 351 ನೇ ವಿಧಿಯಲ್ಲಿ ಹಿಂದಿ ಭಾಷೆಗೆ ವಿಶೇಷ ಮಾನ್ಯತೆ ನೀಡಿರುವುದನ್ನು ಗಮನಿಸಬಹುದು. ಇದೇ ಅವಧಿಯಲ್ಲಿ (1956) ಕೇಂದ್ರ ಶಿಕ್ಷಣ ಸಲಹಾ ಮಂಡಳಿ (ದಿ ಸೆಂಟ್ರಲ್ ಅಡ್ವೈಸರಿ ಬೋರ್ಡ್ ಆಫ್ ಎಜ್ಯುಕೇಶನ್) ಭಾರತದಲ್ಲಿ ಭಾಷಾ ಸಮಸ್ಯೆಯನ್ನು ಅಧ್ಯಯನ ಮಾಡಿ ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರವನ್ನು ಸೂಚಿಸಿತು. ಈ ಸೂಚನೆಯನ್ನು 1961ರ ಭಾರತ ರಾಜ್ಯಗಳ ಮುಖ್ಯಮಂತ್ರಿಗಳ ಸಮಾವೇಶದಲ್ಲಿ ಅಧಿಕೃತವಾಗಿ ಒಪ್ಪಿಕೊಳ್ಳಲಾಯಿತು.

**ತ್ರಿಭಾಷಾ ಸೂತ್ರದ ಪ್ರಕಾರ ವಿದ್ಯಾರ್ಥಿಗಳು ಮೂರು ಭಾಷೆಗಳನ್ನು ಕಲಿಯಬೇಕು.**

1) ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ, ಪ್ರಾಥಮಿಕ ಶಿಕ್ಷಣದಲ್ಲಿ ಈ ಭಾಷೆ ಕಡ್ಡಾಯ.
2) ಭಾರತ ಒಕ್ಕೂಟದ ಅಧಿಕೃತ ಭಾಷೆ ಹಿಂದಿ. ಮಾಧ್ಯಮಿಕ ಶಿಕ್ಷಣದಿಂದ ಈ ಭಾಷೆಯ ಕಲಿಕೆ ಪ್ರಾರಂಭವಾಗುತ್ತದೆ.
3) ಈ ಮೇಲೆ ಸೂಚಿಸದಿರುವ ಒಂದು ಆಧುನಿಕ ಭಾರತೀಯ ಭಾಷೆ ಅಥವಾ ಯೂರೋಪಿಯನ್ ಭಾಷೆ (ಇಂಗ್ಲಿಷ್).



ತ್ರಿಭಾಷಾ ಸೂತ್ರವೂ ಸರ್ವಸಮ್ಮತವಾಗಿ ಒಪ್ಪಿಗೆಯಾಗದೇ ನಿರ್ಲಕ್ಷ್ಯಕ್ಕೀಡಾಗಿದೆ ಎನ್ನಲಾಗುತ್ತಿದೆ.

ಭಾರತದಲ್ಲಿ ಸುಮಾರು 3% ರಷ್ಟು ಜನ ಇಂಗ್ಲಿಷ್ ಮಾತನಾಡುತ್ತಾರೆ. ಭಾರತದ ಇತರ ಪ್ರಾದೇಶಿಕ ಭಾಷೀಯ ಶಿಕ್ಷಣ, ಸಂಸ್ಕೃತಿ, ಸಾಹಿತ್ಯ ತಿಳಿಯುವುದರಿಂದ ಭಾರತೀಯತೆಯ ಪ್ರಜ್ಞೆ ಮೂಡುತ್ತದೆ. ಅದನ್ನು ಬಿಟ್ಟು ಸಂವಿಧಾನದ **350 (ಕ)** ಅನುಚ್ಛೇದದಲ್ಲಿ ಮಕ್ಕಳ ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕೆಂದು ಅವಕಾಶ ಕಲ್ಪಿಸಲಾಗಿದೆ.

**1986** ರ ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರಾದೇಶಿಕ ಭಾಷಾ ಅಭಿವೃದ್ಧಿಪರ ಕಾಳಜಿ ಹೊಂದಿದೆ. ತ್ರಿಭಾಷಾ ಸೂತ್ರವನ್ನು ಜಾರಿಗೆ ತರುವಲ್ಲಿ ಉತ್ತಮ ಪ್ರಯತ್ನ ನಡೆಯಬೇಕೆಂಬ ಆಸಕ್ತಿಯ ಹಿನ್ನೆಲೆಯಲ್ಲಿ ಶಿಕ್ಷಣ ನೀತಿಯು ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷೆಗಳ ಶಿಕ್ಷಣವೇ ಮಾಧ್ಯಮವಾಗಬೇಕೆಂಬ ಇಂಗಿತ ವ್ಯಕ್ತಪಡಿಸಿದೆ.

ಸಂವಿಧಾನದ **351ನೇ** ವಿಧಿಯ ಪ್ರಕಾರ ಹಿಂದಿಯನ್ನು ಭಾರತದ ಸಂಪರ್ಕ ಭಾಷೆಯನ್ನಾಗಿ ಬೆಳೆಸಬೇಕೆಂಬ ಅಂಶವನ್ನು ಹೇಳಿರುವ ಶಿಕ್ಷಣ ನೀತಿಯು ಭಾರತದ ಪ್ರಾಚೀನ ಇತಿಹಾಸ, ಇಂಡಾಲಾಜಿ *(Indology)* ಪ್ರಾಚ್ಯಶಾಸ್ತ್ರಗಳನ್ನು ಕಲಿಸುವಂತೆ, ವಿಶ್ವವಿದ್ಯಾಲಯದ ಮಟ್ಟದಲ್ಲಿ ಸಂಸ್ಕೃತ ಭಾಷೆಯ ಅಭಿವೃದ್ಧಿ ಬಗೆಗೂ, ಇಂಗ್ಲಿಷ್ ಮತ್ತು ಇತರೆ ಯೂರೋಪಿಯನ್ ಭಾಷೆಗಳ ಅಭಿವೃದ್ಧಿಗೆ ಸೌಕರ್ಯಗಳನ್ನು ನೀಡಬೇಕೆಂದು ಶಿಫಾರಸ್ಸು ಮಾಡಿದೆ.

## ಶಿಕ್ಷಣದಲ್ಲಿ ಕನ್ನಡವೇ ಪ್ರಥಮ ಭಾಷೆ -ಗೋಕಾಕ ವರದಿ ಶಿಫಾರಸ್ಸು

27–01–1981 ಡಾ ವಿ ಕೆ ಗೋಕಾಕರವರ ಅಧ್ಯಕ್ಷತೆಯಲ್ಲಿನ ಸಮಿತಿಯು ಕರ್ನಾಟಕ ಸರಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಶಿಫಾರಸ್ಸಿನ ಪ್ರಕಾರ ಎಲ್ಲಾ ಮಕ್ಕಳಿಗೂ 3ನೇ ತರಗತಿಯಿಂದ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು. ಪ್ರೌಢಶಾಲೆಗಳಲ್ಲಿ 8, 9 ಮತ್ತು 10ನೇ ತರಗತಿಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ 150 ಅಂಕಗಳಿಗೆ ಕನ್ನಡವನ್ನು ಕಡ್ಡಾಯವಾಗಿ ಓದಬೇಕು.

ಇದು ಕನ್ನಡ ಮಾತೃಭಾಷೆ ವಿದ್ಯಾರ್ಥಿಗಳಿಗೆ 1981–82ರಿಂದಲೇ ಜಾರಿಯಾಗಬೇಕು. ಕನ್ನಡೇತರ ವಿದ್ಯಾರ್ಥಿಗಳಿಗೆ 1981–82ರಿಂದ 3ನೇ ತರಗತಿಯಿಂದ ಕಲಿಸಬೇಕು ಹಾಗೂ 1986–87ರಿಂದ 150 ಅಂಕಗಳಿಗೆ ಕನ್ನಡವನ್ನು ಮೊದಲ ಭಾಷೆಯಾಗಿ ಕಲಿಸಬೇಕು. ಕನ್ನಡ ಬಿಟ್ಟು ಉಳಿದ ಭಾಷೆಗಳಲ್ಲಿನ 2 ಭಾಷೆಗಳನ್ನು 100 ಮತ್ತು 50 ಅಂಕಗಳಿಗೆ ಕಲಿಯಬೇಕು.

ಗೋಕಾಕ ವರದಿ ನಂತರ ಭಾಷಾ ಅಲ್ಪಸಂಖ್ಯಾತರ ರಕ್ಷಣೆಗಾಗಿ ಇರುವ ಸಂವಿಧಾನದ 29–30ನೇ ವಿಧಿಗಳು ಉಲ್ಲಂಘನೆಯಾಗ-ಬಾರದೆಂದು ಕರ್ನಾಟಕದ ಉಚ್ಚ ನ್ಯಾಯಾಲಯವು 25–01–1989ರಂದು ತನ್ನ ಅಂತಿಮ ತೀರ್ಪನ್ನು ನೀಡಿತು. ಈ ತೀರ್ಪಿಗನುಗುಣವಾಗಿ ಸರ್ಕಾರವು 19–06–1989ರಂದು ಹೊರಡಿಸಿದ ಆದೇಶದಲ್ಲಿ ಈ ಕೆಳಗಿನ ನೀತಿಗಳನ್ನು ಸ್ಪಷ್ಟಪಡಿಸಿತು.

- 1ರಿಂದ 4ನೇ ತರಗತಿಯವರೆಗೆ ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಿರುತ್ತದೆ.
- 3ನೇ ತರಗತಿಯಿಂದ ಕನ್ನಡೇತರ ವಿದ್ಯಾರ್ಥಿಗಳಿಗೆ ಮಾತೃಭಾಷೆಯ ಜೊತೆಗೆ ಕನ್ನಡವನ್ನು ಐಚ್ಛಿಕವಾಗಿ ಕಲಿಸಲಾಗುತ್ತದೆ.
- 5ನೇ ತರಗತಿಯಿಂದ 7ನೇ ತರಗತಿಯವರೆಗೆ ಕನ್ನಡವನ್ನು ಹಾಗೂ ಕನ್ನಡೇತರ ಭಾಷೆಯೊಂದನ್ನು ಕಲಿಯುವುದು ಕಡ್ಡಾಯ.
- ಪ್ರೌಢಶಾಲಾ ಹಂತದಲ್ಲಿ 3 ಭಾಷೆಗಳ ಅಧ್ಯಯನ ಕಡ್ಡಾಯವಾಗಿರುತ್ತದೆ. ಕನ್ನಡವನ್ನು ಮೊದಲ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳದೇ ಇರುವವರು ಉಳಿದ ಎರಡು ಭಾಷೆಗಳಲ್ಲಿ ಒಂದನ್ನು ಕಡ್ಡಾಯವಾಗಿ ಕನ್ನಡವನ್ನು ಆರಿಸಿಕೊಳ್ಳಬೇಕು.
- ಕನ್ನಡೇತರ ಮಕ್ಕಳಿಗೆ ಕನ್ನಡದಲ್ಲಿ, ಕನ್ನಡ ಮಕ್ಕಳಿಗೆ ಹಿಂದಿಯಲ್ಲಿ 15 ಕೃಪಾಂಕಗಳಿರುತ್ತವೆ.

ಹೀಗೆ ಕನ್ನಡ ಭಾಷೆಯು ಪ್ರಾಧಾನ್ಯತೆಯು ಅನೇಕ ಆಯಾಮಗಳಲ್ಲಿ ಬದಲಾವಣೆ ಹೊಂದುತ್ತಾ ಬಂದಿದೆ.

## ಪ್ರೊ ಬರಗೂರು ರಾಮಚಂದ್ರಪ್ಪ ವರದಿಯ ಶಿಫಾರಸ್ಸುಗಳು

ಶಿಕ್ಷಣದಲ್ಲಿ ಕನ್ನಡ ಮಾಧ್ಯಮಕ್ಕೆ ಬೆಂಬಲವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಪ್ರೊ ಬರಗೂರು ರಾಮಚಂದ್ರಪ್ಪರವರು ಶಿಕ್ಷಣ ಮತ್ತು ಮಾಧ್ಯಮದ ಬಗ್ಗೆ ಕೆಲವು ಶಿಫಾರಸ್ಸುಗಳನ್ನು ಮಾಡಿದರು. ಅವುಗಳು ಈ ಕೆಳಗಿನಂತಿವೆ.

Scanned with CamScanner

## ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ಪರೀಕ್ಷೆಯ ಸಿದ್ಧತೆ

### ಶಿಫಾರಸ್ಸುಗಳು:

- ಅಂಗನವಾಡಿ ಮತ್ತು ಕಿಂಡರ್ ಗಾರ್ಟನ್ ಶಿಕ್ಷಣವನ್ನು ಒಟ್ಟುಗೂಡಿಸಿ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಏಕರೂಪತೆ ತರಬೇಕು.
- ಪೂರ್ವ ಪ್ರಾಥಮಿಕ ಶಿಕ್ಷಣದಿಂದಲೇ ಕನ್ನಡ ಮಾಧ್ಯಮ ಕಡ್ಡಾಯವಾಗಿಸುವುದು.
- 1 ರಿಂದ 7ನೇ ತರಗತಿವರೆಗಿನ ಪ್ರಾಥಮಿಕ ಶಿಕ್ಷಣವು ಸಂಪೂರ್ಣವಾಗಿ ಮಾತೃಭಾಷೆ ಅಥವಾ ಕನ್ನಡ ಮಾಧ್ಯಮದ ಶಿಕ್ಷಣವಾಗಬೇಕು.
- ಆಂಗ್ಲ ಭಾಷಾ ಮಾಧ್ಯಮದ ಪ್ರಾಥಮಿಕ ಶಾಲೆಗಳು ಕ್ರಮವಾಗಿ ಕನ್ನಡ ಮಾಧ್ಯಮದ ಶಾಲೆಗಳಾಗಿ ಪರಿವರ್ತಿಸುವುದು.
- 1 ರಿಂದ 10ನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ಬಿಇ, ಎಂಬಿಬಿಎಸ್, ಬಿಎಡ್, ಡಿಎಡ್ (ಟಿಸಿಹೆಚ್), ಐಟಿಐ, ಪಾಲಿಟೆಕ್ನಿಕ್ ವೃತ್ತಿ ಶಿಕ್ಷಣದಲ್ಲಿ ಆದ್ಯತೆಯ ಮೇಲೆ ಪ್ರವೇಶ ನೀಡಬೇಕು.
- 1 ರಿಂದ 10ನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪೂರೈಸಿದ ಅಭ್ಯರ್ಥಿಗಳಿಗೆ ಆದ್ಯತೆಯ ಮೇಲೆ ಉದ್ಯೋಗ ನೀಡಲು ನಿರ್ದಿಷ್ಟ ಪ್ರಮಾಣದ ನಿಗದಿ ಮಾಡಬೇಕು. ಗಡಿನಾಡು ಮತ್ತು ಹೊರನಾಡಿನ ಅಭ್ಯರ್ಥಿಗಳಿಗೂ ಈ ಅವಕಾಶಗಳು ಲಭ್ಯವಾಗುತ್ತವೆ.
- ಕನ್ನಡೇತರ ಮಾಧ್ಯಮದ ವಿದ್ಯಾರ್ಥಿಗಳಿಗೆ 3ನೇ ತರಗತಿಯಿಂದ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಸುವುದು ಕಡ್ಡಾಯವಾಗಬೇಕು. ರಾಜ್ಯ ಹೈಕೋರ್ಟ್ 25-01-1989ರಂದು ಈ ಕುರಿತಾಗಿ ತೀರ್ಪು ನೀಡಿದೆ.
- ಉರ್ದು ಶಾಲೆಗಳನ್ನು ಒಳಗೊಂಡಂತೆ ಅಲ್ಪ ಸಂಖ್ಯಾತರ ಶಾಲೆಗಳಿಗೆ ಕಡ್ಡಾಯವಾಗಿ ಪೂರ್ಣಾವಧಿ ಕನ್ನಡ ಅಧ್ಯಾಪಕರನ್ನು ನೇಮಿಸುವುದು.
- 3 ನೆಯ ತರಗತಿಯಿಂದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷ್‌ನ್ನು ಒಂದು ಭಾಷೆಯನ್ನಾಗಿ ಕಲಿಸುವುದು. ಕನ್ನಡ ಕಲಿಕೆಯ ವಿಧಾನವನ್ನೇ ಇಂಗ್ಲಿಷ್ ಕಲಿಕೆಗೂ ಅಳವಡಿಸದೆ ಮಾತುಗಾರಿಕೆ, ಸಂವಾದ, ಸಂವಹನಾಶೀಲತೆಗಳನ್ನು ಬೆಳೆಸುವ ದಿಕ್ಕಿನಲ್ಲಿ ಪರಿಣಿತಿ ಕೊಡುವಂತೆ ಇಂಗ್ಲಿಷ್ ಕಲಿಕಾ ವಿಧಾನವನ್ನು ಬದಲಾಯಿಸಬೇಕು.
- ಕನ್ನಡ ಹಾಗೂ ಕನ್ನಡೇತರರು ಪ್ರಾಥಮಿಕ ಶಿಕ್ಷಣದ 3ನೇ ತರಗತಿಯಿಂದಲೇ ಆಂಗ್ಲ ಭಾಷೆಯನ್ನು ಒಂದು ಭಾಷೆಯಾಗಿ ಕರೆಯುವ ದೃಷ್ಟಿಯಿಂದ ಮೂರು ಭಾಷಾ ಕಲಿಕಾ ನೀತಿಯನ್ನು ಮುಂದುವರಿಸಿ, ಕಲಿಕೆ ಮತ್ತು ಪರೀಕ್ಷೆಯನ್ನು ಕಡ್ಡಾಯಗೊಳಿಸಬೇಕು.
- ಕನ್ನಡ ಭಾಷೆಯನ್ನು ಬಿಡದೆ ಯಾವುದಾದರೂ ಎರಡು ಭಾಷೆಯಲ್ಲಿ ಉತ್ತೀರ್ಣತೆಯಾದರೂ ಸಾಕೆಂಬ ನಿಯಮ ರೂಪಿಸುವುದು.
- ಪದವಿ ಪೂರ್ವ ಹಾಗೂ ಪದವಿ ಶಿಕ್ಷಣದಲ್ಲಿ ಇತರೆ ವಿಷಯಗಳೊಂದಿಗೆ ಕನ್ನಡ ವಿಷಯವನ್ನು ಐಚ್ಛಿಕ ವಿಷಯವಾಗಿ ವ್ಯಾಸಂಗ ಮಾಡಲು ಇಚ್ಛಿಸುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಷರತ್ತುಗಳನ್ನು ಅಗತ್ಯ ಪ್ರಮಾಣದಲ್ಲಿ ಸಡಿಲಿಕೆ 'ವಿಶೇಷಾವಕಾಶ' ಕಲ್ಪಿಸಬೇಕು.
- ಸಂಪೂರ್ಣ ಕನ್ನಡ ಮಾಧ್ಯಮದ ಶಾಲೆ- ಕಾಲೇಜುಗಳಿಗಾಗಿ ವಿಶೇಷಾನುದಾನ ರೂಪಿಸಬೇಕು.
- ಬಿಸಿಎ, ಬಿಬಿಎಂ, ಬಿವಿಚ್‌ಎಂ, ಎಲ್‌ಎಲ್‌ಬಿ, ಐಟಿಐ, ನರ್ಸಿಂಗ್ ಶಾಲೆ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಕಲಿಸಬೇಕು.
- ಬಿಎಡ್ ಹಾಗೂ ಡಿಎಡ್ (ಟಿಸಿಹೆಚ್) ಗಳಲ್ಲಿ ಕನ್ನಡ ಕಡ್ಡಾಯ ಭಾಷೆಯಾಗಿರಬೇಕು.
- 5ನೇ ತರಗತಿಯಿಂದ ಪದವಿ ಪೂರ್ವ ತರಗತಿಯವರೆಗೆ ಕನ್ನಡ ಪಠ್ಯಪುಸ್ತಕಗಳು ಸಂಸ್ಕೃತಿ ಪಠ್ಯಗಳಾಗಿ ರೂಪಾಂತರ ಹೊಂದಬೇಕು. ಕನ್ನಡ ಭಾರತಿ ಮುಂತಾದ ಹೆಸರುಗಳ ಬದಲು ಕನ್ನಡ ಸಂಸ್ಕೃತಿ ಪಠ್ಯ ಅಥವಾ ಕನ್ನಡ ಸಾಂಸ್ಕೃತಿಕ ಪಠ್ಯ ಎಂದು ಹೆಸರಿಸಬೇಕು.
- ಸರ್ಕಾರದ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳ ಕಂಪ್ಯೂಟರ್ ಶಿಕ್ಷಣದಲ್ಲಿ ಕನ್ನಡವು ಬೋಧನೆ ಮತ್ತು ಬಳಕೆಯ ಭಾಷೆಯಾಗಬೇಕು.
- ಶಿಕ್ಷಣದ ಪಠ್ಯಕ್ರಮ, ಮಾಧ್ಯಮ, ಸಮವಸ್ತ್ರ, ಕಾಲಾವಧಿ- ಮುಂತಾದ ಮುಖ್ಯ ಅಂಶಗಳಲ್ಲಿ ಏಕರೂಪತೆಯನ್ನು ಸಾಧಿಸುವ ಶಿಕ್ಷಣ ನೀತಿಯನ್ನು ರೂಪಿಸಿ ಅಸಮತೋಲನವನ್ನು ಹೋಗಲಾಡಿಸಬೇಕು.

## ಪ್ರಥಮ ಭಾಷೆಯಾಗಿ ಕನ್ನಡ ಬೋಧನೆ

### ಬೋಧನಾ ಪದ್ಧತಿಗಳು

- ಪಠ್ಯ ಪುಸ್ತಕ ಪದ್ಧತಿ
- ಕಥನ ಪದ್ಧತಿ
- ನಾಟಕಾಭಿನಯ ಪದ್ಧತಿ
- ಅನುಗಮನ ಪದ್ಧತಿ
- ಕ್ರೀಡಾ ಪದ್ಧತಿ
- ಅನ್ವೇಷಣಾ ಪದ್ಧತಿ
- ಪಾತ್ರ ನಿರ್ವಹಣಾ ಪದ್ಧತಿ
- ದೃಕ್-ಶ್ರವಣೋಪಕರಣ ಪದ್ಧತಿ
- ಉಪನ್ಯಾಸ ಪದ್ಧತಿ
- ಚರ್ಚಾ ಪದ್ಧತಿ
- ಖಂಡ ಪದ್ಧತಿ
- ಅಖಂಡ ಪದ್ಧತಿ
- ಸಂಪೂರ್ಣ ಪದ್ಧತಿ
- ಪ್ರಶ್ನೋತ್ತರ ಪದ್ಧತಿ

### ಕನ್ನಡ ಬೋಧನೆಯ ಗುರಿ

ಶಿಕ್ಷಕನು ಮಕ್ಕಳಲ್ಲಿ ಭಾಷಾ ಕೌಶಲ್ಯಗಳಾದ ಆಲಿಸುವುದು ಮಾತನಾಡುವುದು, ಓದುವುದು ಮತ್ತು ಬರೆಯುವುದು ಇವುಗಳನ್ನು ಬೆಳೆಸುವುದರ ಮೂಲಕ ಕನ್ನಡ ಭಾಷಾ ಸ್ವಾಮಿತ್ವವನ್ನು ಬೆಳೆಸುವುದು.



### ಬೋಧನೆಯ ಗುರಿಗಳು

- ಮಕ್ಕಳಲ್ಲಿ ಗ್ರಹಣ ಶಕ್ತಿ ಬೆಳೆಸುವುದು.
- ಮಕ್ಕಳಲ್ಲಿ ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸುವುದು.
- ಮಕ್ಕಳಲ್ಲಿ ರಸಸ್ವಾದ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಮಕ್ಕಳಲ್ಲಿ ನೈತಿಕ ಮತ್ತು ಸತ್ಯ ಸಂಗತಿಗಳನ್ನು ಬೆಳೆಸುವುದು.
- ಮಕ್ಕಳು ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಪ್ರಶಂಸಿಸುವಂತೆ ಮಾಡುವುದು.
- ಮಕ್ಕಳು ತಮ್ಮ ಭಾವನೆಗಳನ್ನು ಮತ್ತು ತಿಳಿದ ವಿಚಾರಗಳನ್ನು ವೈವಿಧ್ಯಮಯವಾಗಿ ವ್ಯಕ್ತಪಡಿಸಲು ಬೇಕಾಗುವಂತಹ ಶಬ್ದ ಭಂಡಾರವನ್ನು ಹೆಚ್ಚಿಸುವುದು.
- ಮಕ್ಕಳಲ್ಲಿ ಸೌಂದರ್ಯ ಪ್ರಜ್ಞೆಯನ್ನು ಬೆಳೆಸುವುದು.
- ಮಕ್ಕಳಲ್ಲಿ ಸೃಜನಶೀಲತೆ ಮತ್ತು ಉತ್ಪಾದಕತ್ವ ಶಕ್ತಿಯನ್ನು ಬೆಳೆಸುವುದು.
- ಓದುಗಾರಿಕೆ, ಸ್ಪಷ್ಟ ಉಚ್ಚಾರಣೆಯ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುವುದು.
- ಮಕ್ಕಳಲ್ಲಿ ವ್ಯವಹಾರಿಕ ಪ್ರಜ್ಞೆಯನ್ನು ಬೆಳೆಸುವುದು.
- ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆಯನ್ನು ಮಕ್ಕಳಿಗೆ ತಿಳಿಸುವುದು.
- ವಿಷಯ ಜ್ಞಾನ, ತಾರ್ಕಿಕ ಚಿಂತನಾ ಶಕ್ತಿಗಳನ್ನು ಬೆಳೆಸುವುದು.
- ಭಾಷೆಯ ಬೋಧನೆಯ ಮುಖಾಂತರ ಮಕ್ಕಳಲ್ಲಿ ವೈಚಾರಿಕ, ಸಾಹಿತ್ಯಿಕ ಭಾಷಾಶಾಸ್ತ್ರದ ಜ್ಞಾನ ಮತ್ತು ತಿಳುವಳಿಕೆ ಮೂಡಿಸುವುದು.
- ಮಕ್ಕಳ ಭಾವನಾ ಶಕ್ತಿಯನ್ನು ಪೋಷಿಸುವುದು.

Scanned with CamScanner

## ಕನ್ನಡ ಬೋಧನೆಯ ಉದ್ದೇಶಗಳು

- ಮಕ್ಕಳಲ್ಲಿ ಆಲಿಸುವ, ಗ್ರಹಿಸುವ, ವೇಗವಾಗಿ ಓದುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.
- ಕನ್ನಡ ನಾಡು-ನುಡಿ, ಸಂಸ್ಕೃತಿಯ ಬಗ್ಗೆ ಗೌರವ ಭಾವನೆಯನ್ನು ಹೊಂದುವಂತೆ ಮಾಡುವುದು.
- ಕರ್ತವ್ಯ ಪ್ರಜ್ಞೆಯನ್ನು ಹಾಗೂ ಜೀವನ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವುದು.
- ಮಕ್ಕಳು ಸ್ವತಂತ್ರವಾಗಿ ಓದುವ ಹಾಗೂ ಗ್ರಹಿಸುವ ಕೌಶಲ್ಯವನ್ನು ಬೆಳೆಸುವುದು.
- ಸಮಾನತೆ, ರಾಷ್ಟ್ರೀಯ ಪ್ರಜ್ಞೆ, ಜಾತ್ಯಾತೀತತೆ ಮುಂತಾದವುಗಳನ್ನು ಮೈಗೂಡಿಸಿಕೊಳ್ಳುವಂತೆ ಮಕ್ಕಳಿಗೆ ಅರಿವು ಮೂಡಿಸುವುದು.
- ಗದ್ಯ ಮತ್ತು ಪದ್ಯಗಳಲ್ಲಿ ಬರುವ ಸಾಮಾಜಿಕ, ಆರ್ಥಿಕ, ನೈತಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಮಕ್ಕಳಿಗೆ ಪರಿಚಯಿಸುವುದು.
- ಪರಿಸರ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ, ವೈಜ್ಞಾನಿಕ ಮನೋಭಾವ ಇವುಗಳನ್ನು ಸಾಹಿತ್ಯದ ಮೂಲಕ ಮಕ್ಕಳಿಗೆ ಪರಿಚಯಿಸುವುದು.

### ಪ್ರಬಂಧಗಳು



- ಪರಿಸರ; ಮಾಲಿನ್ಯ ಮತ್ತು ಸಂರಕ್ಷಣೆ
- ಆರೋಗ್ಯ ಮತ್ತು ನೈರ್ಮಲ್ಯೀಕರಣ
- ಕಂಪ್ಯೂಟರ್, ಬಾಹ್ಯಾಕಾಶ ವಿಜ್ಞಾನ
- ಜನಪದ ಸಾಹಿತ್ಯ, ಕಲೆ
- ಸಂಪರ್ಕ ಸಾಧನಗಳು; ಆಕಾಶವಾಣಿ, ವೃತ್ತಪತ್ರಿಕೆ
- ಸಾಮಾಜಿಕ ಪಿಡುಗುಗಳು; ವರದಕ್ಷಿಣೆ, ಮೂಢನಂಬಿಕೆ, ಜಾತೀಯತೆ, ಜನಸಂಖ್ಯಾ ಸ್ಫೋಟ

### ಪತ್ರಲೇಖನ

- ವೈಯಕ್ತಿಕ ಪತ್ರಗಳು, ಮನವಿ ಪತ್ರಗಳು, ಆಡಳಿತ ವಿಷಯಗಳಿಗೆ ಸಂಬಂಧಿಸಿದ ಪತ್ರಗಳು, ಜಾಹೀರಾತು ಮತ್ತು ಪ್ರಕಟಣೆಗಳು.

### ಮಾತನಾಡುವ ಕೌಶಲ್ಯವನ್ನು ಬೆಳೆಸುವ ಅಭ್ಯಾಸಗಳು

- ಚರ್ಚಾ ಸ್ಪರ್ಧೆ, ಭಾಷಣ ಸ್ಪರ್ಧೆ, ಕಥೆ ಹೇಳುವುದು, ರಾಷ್ಟ್ರೀಯ ಐಕ್ಯತೆ, ರಾಷ್ಟ್ರೀಯ ಹಬ್ಬಗಳು, ಪ್ರಬಂಧಗಳನ್ನು ಓದುವುದು, ಬರೆಯುವುದು, ಗಾದೆ ನುಡಿಗಟ್ಟುಗಳು, ಅಭಿಪ್ರಾಯ ವಿಸ್ತರಣೆ ಮುಂತಾದ ಭಾಷಾ ಅಭ್ಯಾಸಗಳ ಚಟುವಟಿಕೆಗಳನ್ನು ಏರ್ಪಡಿಸುವುದು.

## ಭಾಷಾ ಕೌಶಲ್ಯಗಳು (Language Skills)



**1) ಆಲಿಸುವಿಕೆ (ಶ್ರವಣ):** ಆಲಿಸುವಿಕೆಯು ಒಂದು ಪ್ರಜ್ಞಾ-ಪೂರ್ವಕ, ಉದ್ದೇಶಪೂರ್ವಕ, ಮಾನಸಿಕ ಪ್ರಕ್ರಿಯೆಯಾಗಿದ್ದು, ನಾವು ಕೇಳುವ ಶಬ್ದಗಳಲ್ಲಿರುವ ಅರ್ಥಗಳನ್ನು, ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ನಿರೂಪಿಸುವುದು.

### ಆಲಿಸುವಿಕೆಯ ಮಹತ್ವ

- ಪರಸ್ಪರ ವಿಚಾರ ವಿನಿಮಯಗಳಿಗೆ, ಮನರಂಜನೆ, ವಿಷಯ ಜ್ಞಾನಕ್ಕೆ, ಸೃಜನಶೀಲತೆಗೆ ಭಾಷಾ ಸಾಮರ್ಥ್ಯಕ್ಕೆ, ಸಾಮಾಜಿಕ ಸಂವಹನಕ್ಕೆ ಆಲಿಸುವಿಕೆ ಸಹಾಯಕವಾಗುತ್ತದೆ.

### ಆಲಿಸುವಿಕೆಯಲ್ಲಾಗುವ ದೋಷಗಳು

- **ಶ್ರವಣ ದೋಷಗಳು ಮತ್ತು ಅನಾರೋಗ್ಯ-** ಕಿವಿ ಕೇಳಿಸದೇ ಇರುವ, ಕಿವಿ ಸೋರುವಿಕೆ ಹಾಗೂ ದೈಹಿಕ ಅನಾರೋಗ್ಯದಿಂದ ಬಳಲುತ್ತಿರುವ ಮಗುವು, ಸ್ಪಷ್ಟವಾಗಿ ವಿಷಯ ಗ್ರಹಣ ಮಾಡುವುದಿಲ್ಲ.
- **ಮಾನಸಿಕ ಸಿದ್ಧತೆಯ ಕೊರತೆ**-ಮಾನಸಿಕ ಹಾಗೂ ಶಾರೀರಿಕವಾಗಿ ಸಿದ್ಧರಾಗಿಲ್ಲದಿದ್ದಾಗ ಯಾಂತ್ರಿಕವಾಗಿ ಕೇಳಿದರೆ ಅರ್ಥವಾಗುವುದಿಲ್ಲ.
- **ಮಾನಸಿಕ ವಿಕ್ಷಿಪ್ತತೆ**-ಮಾನಸಿಕ ಕ್ಷೋಭೆಯಿಂದ ಬಳಲುತ್ತಿರುವಾಗ ಆಲಿಸುವಿಕೆ ಪರಿಣಾಮಕಾರಿಯಾಗುವುದಿಲ್ಲ. ವಿಷಯವನ್ನು ಅಪೂರ್ಣವಾಗಿ ಕೇಳುವುದು.
- **ವೈಯಕ್ತಿಕ ದೋಷಗಳು**-ಕೇಳುವ ವಿಷಯ ಅಥವಾ ಹೇಳುವ ವ್ಯಕ್ತಿಯ ಕುರಿತ ಪೂರ್ವಾಗ್ರಹ ಪೀಡಿತರಾಗಿ ವಿಷಯವನ್ನು ಅತೀ ಪ್ರಮುಖ ಅಥವಾ ಅಪ್ರಮುಖವೆಂದು ಭಾವಿಸುವುದರಿಂದ ಆಲಿಸುವಿಕೆಯಲ್ಲಿನ ದೋಷ ಉಂಟಾಗುತ್ತದೆ.

### ಆಲಿಸುವಿಕೆ/ಶ್ರವಣ ಅಭಿವೃದ್ಧಿ ಚಟುವಟಿಕೆಗಳು

- ಮಕ್ಕಳು ಸುಖಾಸೀನರಾಗಿ ಆಲಿಸುವ ವ್ಯವಸ್ಥೆ ಮಾಡಬೇಕು.
- ಬಾನುಲಿ, ದೂರದರ್ಶನಗಳಲ್ಲಿ ಬಿತ್ತರವಾಗುವ ವಾರ್ತೆಗಳನ್ನು ಕೇಳುವುದು.
- ಶ್ರವಣೇಂದ್ರಿಯಗಳಿಗೆ ತರಬೇತಿ ನೀಡುವುದು.
- ಪದಗಳಲ್ಲಾಗುವ ಅರ್ಥ ವ್ಯತ್ಯಾಸ ತಿಳಿಸಬೇಕು ಹಾಗೂ ಶಬ್ದ ಭಂಡಾರವನ್ನು ಬೆಳೆಸಬೇಕು. ಮಕ್ಕಳಿಗೆ ಪ್ರಶ್ನೆ ಕೇಳಲು ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಕಲ್ಪಿಸಬೇಕು.
- ಸಂಭಾಷಣೆ, ಕಾವ್ಯವಾಚನ, ಸಂಗೀತ, ನಾಟಕ, ಉಪನ್ಯಾಸ, ಚರ್ಚಾಕೂಟ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

**2) ಮಾತುಗಾರಿಕೆ:** ಆದಿಮಾನವನು ಮಾತನಾಡಲು ಪ್ರಯತ್ನಪಟ್ಟಾಗ ಭಾಷೆ ಹುಟ್ಟಿತು. ಬಹಳ ಕಾಲದವರೆಗೆ ಭಾಷೆಗೆ ಲಿಪಿ ಇರಲಿಲ್ಲ. ಬಹುಕಾಲದವರೆಗೆ ಮಾತುಗಾರಿಕೆಯೇ ಮಾನವನ ಏಕೈಕ ಸಂಪರ್ಕ ಸಾಧನವಾಗಿತ್ತು. ಮಾತುಗಾರಿಕೆಯನ್ನು ಹೇಳುವುದು, ಮಾತನಾಡುವುದು, ಭಾಷಣ, ಉಪನ್ಯಾಸ ಎಂದು ಅನೇಕ ಅರ್ಥದಲ್ಲಿ ಹೇಳಬಹುದು.

### ಮಾತುಗಾರಿಕೆಯ ಮಹತ್ವ

- ಮಾತುಗಾರಿಕೆಯು ಮನುಷ್ಯನ ಸಾಮಾಜಿಕ ಜೀವನದ ಮೇಲೆ ಪ್ರಭಾವವನ್ನು ಬೀರುತ್ತದೆ. ಮಾತುಗಾರಿಕೆಯು ನಮ್ಮ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿದ್ದು, ಸಾಮಾಜಿಕ ಬದುಕನ್ನು ಜೀವಂತವಾಗಿಸಿದೆ.
- ಮಾತುಗಾರಿಕೆಯು ವ್ಯಕ್ತಿ ಹಾಗೂ ಸಮಾಜದ ಉನ್ನತಿಗೆ ಸಹಕಾರಿಯಾಗಿದೆ.
- ವ್ಯಕ್ತಿಯ ದೈಹಿಕ, ಮಾನಸಿಕ, ಆರ್ಥಿಕ, ವೃತ್ತಿಪರ, ಸಂವೇಗಾತ್ಮಕ, ಮನರಂಜನಾ ಬೆಳವಣಿಗೆಗೆ ಕಾರಣವಾಗಿದೆ.
- ಸಾಮಾಜಿಕ ಅಗತ್ಯತೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಮಾತುಗಾರಿಕೆ ಅವಶ್ಯಕ.
- ಜ್ಞಾನ ಸಂಪಾದನೆಗೆ, ಜೀವನದ ವಿವಿಧ ರಂಗಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು, ಸಮಾಜ ಜೀವಿಯಾಗಿ ಬಾಳಲು ಅವಶ್ಯಕ.
- ಮಾತುಗಾರಿಕೆ ಸಾಮಾಜಿಕ ವ್ಯವಸ್ಥೆಗೆ ಉತ್ತಮ ನೆಲೆಗಟ್ಟನ್ನು ಒದಗಿಸುತ್ತದೆ.

Scanned with CamScanner

## ಮಾತುಗಾರಿಕೆಯಲ್ಲಿನ ದೋಷಗಳು

- ಭಾಷಾ ಜ್ಞಾನದ ಕೊರತೆ ಮತ್ತು ಭಾಷೆ ಅಪೂರ್ಣತೆಯಿಂದ ಮಾತುಗಾರಿಕೆಯಲ್ಲಿ ದೋಷಗಳು ಕಂಡುಬರುತ್ತವೆ.
- ಮಕ್ಕಳ ಅನಾರೋಗ್ಯ, ಮಾನಸಿಕ ವಿಕ್ಷಿಪ್ತತೆ, ದಪ್ಪನೆಯ ನಾಲಿಗೆ, ಭಯ, ನರಗಳ ತೊಂದರೆ, ದೌರ್ಬಲ್ಯ, ವೇಗವಾಗಿ ಮಾತನಾಡುವುದು, ಉಗ್ಗುವಿಕೆ ಮತ್ತು ತೊದಲುವಿಕೆ ಕಂಡುಬರುತ್ತದೆ.
- ಧ್ವನ್ಯಾಂಗಗಳ ತೊಂದರೆಯಿಂದಲೂ ಸಹ ಮಾತುಗಾರಿಕೆಯಲ್ಲಿ ದೋಷ ಕಂಡುಬರುತ್ತದೆ. ಉದಾ: ಸೀಳು ತುಟಿಗಳು, ಮೂಗಿನ ತೊಂದರೆ, ಶ್ರವಣ ದೋಷ ಇತ್ಯಾದಿ.
- ಅನ್ಯ ಭಾಷೆಗಳ ಪ್ರಭಾವದಿಂದ ಧ್ವನಿಯ ಉಚ್ಚಾರದಲ್ಲಿ ದೋಷ ಕಂಡುಬರುತ್ತದೆ.

## ಮಾತುಗಾರಿಕೆಯ ಸಾಮರ್ಥ್ಯ ಅಭಿವೃದ್ಧಿಗೊಳಿಸುವ ಚಟುವಟಿಕೆಗಳು

- ಸಂಭಾಷಣೆ
- ಕಥೆ ಹೇಳುವುದು
- ಚಿತ್ರ ಪಠಣ
- ಹಾಡುಗಾರಿಕೆ
- ಭಾಷಣ
- ನಾಟಕ
- ಆಟಗಳು
- ಬಾಯೋದು
- ಚರ್ಚಾಕೂಟ, ವರದಿವಾಚನ, ಪಾತ್ರಾಭಿನಯ, ಸಂಗೀತ ಕಾರ್ಯಕ್ರಮ, ಚಿತ್ರಪಟ, ಮಾದರಿ ಪ್ರದರ್ಶಿಸುವಿಕೆ ಮುಂತಾದವುಗಳನ್ನು ಏರ್ಪಡಿಸುವುದು.

## 3) ಓದುಗಾರಿಕೆ (ಪಠಣ)



ಓದುಗಾರಿಕೆ ಭಾಷಾ ಕೌಶಲ್ಯಗಳಲ್ಲೊಂದು. ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ನೆಮ್ಮದಿಯಿಂದ ಬಾಳಿ ಬದುಕಬೇಕಾದರೆ ಮನುಷ್ಯನಿಗೆ ಓದು ಬರಹ ಅತ್ಯಗತ್ಯ. "ಲಿಪಿಗಳು ಯಾಂತ್ರಿಕವಾಗಿ ಕಣ್ಣುಗಳ ಮುಖಾಂತರ ಪ್ರವೇಶಿಸಿ ಬಾಯಿಯ ಮುಖಾಂತರ ಧ್ವನಿಯಾಗಿ ಅಭಿವ್ಯಕ್ತಿ ಹೊಂದುವುದೇ ಓದುಗಾರಿಕೆ". "ಲಿಪಿಯು ಧ್ವನಿಯಾಗಿ ಪರಿವರ್ತನೆ ಹೊಂದುವುದೇ ಓದುಗಾರಿಕೆ". ಹೀಗೆ ಓದಿನಲ್ಲಿ ಸಂಕೇತ, ಧ್ವನಿ ಮತ್ತು ಅರ್ಥ ಎಂಬ ಮೂರು ಘಟಕಗಳಿವೆ.

## ಓದುಗಾರಿಕೆಯನ್ನು ಯಾವಾಗ ಆರಂಭಿಸಬೇಕು?

ಮಕ್ಕಳ 3½ ಅಥವಾ 4ನೆಯ ವಯಸ್ಸಿನಲ್ಲಿ ಓದನ್ನು ಆರಂಭಿಸಬೇಕೆಂದು ಮಾಂಟೆಸರಿಯ ಅಭಿಪ್ರಾಯ. ಆದರೆ ಇದನ್ನು 8ನೇ ವಯಸ್ಸಿನಲ್ಲಿ ಆರಂಭಿಸಬೇಕೆಂದು ಶಿಕ್ಷಣತಜ್ಞ ಡ್ಯೂಯಿ ಹೇಳಿದ್ದಾನೆ. ನಮ್ಮ ದೇಶದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ 6ನೇ ವಯಸ್ಸಿನಿಂದ ಆರಂಭವಾಗುವುದರಿಂದ ಈ ವಯಸ್ಸಿನಲ್ಲಿಯೇ ಓದನ್ನಾರಂಭಿಸುವುದು ಸೂಕ್ತ. ಓದಿಗೆ ಅನುಕೂಲವಾಗುವಂತೆ ಶಾಲೆಯಲ್ಲಿಯೇ ಯೋಗ್ಯ ವಾತಾವರಣ ಕಲ್ಪಿಸಿ ಓದನ್ನಾರಂಭಿಸಬೇಕು.

## ಓದುಗಾರಿಕೆಯ ಕೌಶಲಗಳು

- ಭಾಷಾ ಕೌಶಲಗಳು
- ಚಾಕ್ಷುಷ ಕೌಶಲಗಳು
- ಧ್ವನಿ ಕೌಶಲಗಳು
- ಮಾನಸಿಕ ಕೌಶಲಗಳು
- ಶ್ರವಣ ಕೌಶಲಗಳು

## ಓದುಗಾರಿಕೆಯ ಮಹತ್ವ

ಓದುವುದು ಅವನ ಪ್ರಾಥಮಿಕ ಅವಶ್ಯಕತೆಗಳಲ್ಲೊಂದಾಗಿದೆ. ಮಾನವನು ತನ್ನ ಪ್ರಾಥಮಿಕ ಸಂವಹನ ಕೌಶಲವಾದ ಮಾತಿನಿಂದಲೇ ಜೀವಿಸಬಲ್ಲನಾದರೂ ಆಧುನಿಕ ಸಮಾಜದ ವ್ಯವಹಾರಗಳನ್ನು ಯಶಸ್ವಿಯಾಗಿ ನಡೆಸಲು ಮಾತುಗಾರಿಕೆಯ ಜೊತೆಗೆ ಓದುಗಾರಿಕೆ ಬೇಕು.

1) ಬದುಕನ್ನು ಉತ್ತಮಪಡಿಸಲು ಓದುಗಾರಿಕೆ ಅತ್ಯವಶ್ಯಕ. ಓದಿ, ಓದುತ್ತಿರುವ ವ್ಯಕ್ತಿ ಹೊಸ ಪ್ರಪಂಚವನ್ನು ನೋಡುತ್ತಾನೆ.
2) ಓದಿ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಪಡೆದುಕೊಂಡ ವ್ಯಕ್ತಿ ಉತ್ತಮ ಸತ್ಪ್ರಜೆಯಾಗಿ ರೂಪಿಸಲ್ಪಡುತ್ತಾನೆ, ರಾಷ್ಟ್ರದ ಆಸ್ತಿಯಾಗುತ್ತಾನೆ.
3) ಓದುಗಾರಿಕೆಯು ಮನುಷ್ಯನನ್ನು ಪೂರ್ಣವ್ಯಕ್ತಿಯನ್ನಾಗಿಸುತ್ತದೆ. ಸಂವಾದವು ಜಾಗೃತನನ್ನಾಗಿರಿಸುತ್ತದೆ.
4) ಓದಿನ ಮೂಲಕವಾಗಿ ನಾವು ಕಾಲ ದೇಶಗಳನ್ನು ಮೀರಿ ಸಂಪರ್ಕವನ್ನು ಸ್ಥಾಪಿಸಿಕೊಳ್ಳುವುದು ಸಾಧ್ಯ.
5) ಓದು ನಮ್ಮ ತಿಳುವಳಿಕೆಗೆ ಹೆಚ್ಚಿನ ದೃಢತೆಯನ್ನು ತಂದುಕೊಡುತ್ತದೆ.
6) ಓದುಗಾರಿಕೆಯಿಂದಾಗಿ ಭಾಷಾ ಸ್ವಾಮಿತ್ವ ಉಂಟಾಗುತ್ತದೆ.

## ಓದುಗಾರಿಕೆಯ ಉದ್ದೇಶಗಳು

- ಸರಳವಾಗಿ ಮತ್ತು ಅರ್ಥಪೂರ್ಣವಾಗಿ ಓದುವ ಸಾಮರ್ಥ್ಯವನ್ನು ಬೆಳೆಸುವುದು.
- ಓದುಗಾರಿಕೆಯ ಮೂಲಕ ಮಕ್ಕಳಲ್ಲಿ ಉತ್ತಮ ವ್ಯಕ್ತಿತ್ವ ನಿರ್ಮಾಣ ಮಾಡುವುದು.
- ಓದುಗಾರಿಕೆಯಿಂದ ವೈಚಾರಿಕತೆ, ವೈಜ್ಞಾನಿಕ ಮನೋಭಾವನೆ ಹಾಗೂ ಭಾಷಾ ಸಾಮರ್ಥ್ಯವನ್ನು ಬೆಳೆಸುವುದು.
- ಮಕ್ಕಳಲ್ಲಿ ಸಾಹಿತ್ಯಾಭಿರುಚಿ, ತಾರ್ಕಿಕ ಚಿಂತನಶಕ್ತಿ ಬೆಳೆಸುವುದು.
- ಶಬ್ದ ಸಂಪತ್ತು ಹಾಗೂ ಸೃಜನಶೀಲತೆ ಹೆಚ್ಚಿಸುವುದು.
- ಮೌನ ಓದು, ಬಾಯೋದು, ವಿಸ್ತೃತ ಓದು, ಆತ್ಮ ಸಂತೋಷಕ್ಕಾಗಿ, ಗಾಢ ಓದು, ಸೃಜನಶೀಲ ಓದು, ಇವುಗಳಿಂದ ಓದಿನಲ್ಲಿ ಸಾಮರ್ಥ್ಯ ಹೆಚ್ಚಿಸುವುದು.

## ಓದುಗಾರಿಕೆಯ ಪ್ರಕಾರಗಳು

1) ಬಾಯೋದು (ಮೌಖಿಕ ವಾಚನ, ಗಟ್ಟಿ ಓದು) 2) ಮೌನ ಓದು
3) ಗಾಢ ಓದ 4) ಮುಂದೋದು (ವಿಸ್ತೃತ ವಾಚನ) 5) ಸ್ಥೂಲ ವಾಚನ
6) ಸೂಕ್ಷ್ಮ ವಾಚನ 7) ವಿಮರ್ಶಾತ್ಮಕ ವಾಚನ
8) ಸೃಜನಶೀಲ ವಾಚನ 9) ಶೀಘ್ರ ವಾಚನ

- ಓದಿನ ವೇಗ ಕಂಡುಹಿಡಿಯುವ ಸೂತ್ರ

$$\text{ಓದಿನ ವೇಗ} = \frac{\text{ಓದಿದ ಪದಗಳ ಸಂಖ್ಯೆ}}{\text{ಓದಲು ತೆಗೆದುಕೊಂಡ ಸಮಯ}} \times 60$$

**ಉದಾಹರಣೆಗೆ:** 400 ಪದಗಳುಳ್ಳ ಸಾಮಾನ್ಯ ಮುದ್ರಿತ ಲೇಖನವನ್ನು 100 ಸೆಕೆಂಡುಗಳಲ್ಲಿ ಓದಿದರೆ, ಓದಿನ ವೇಗವನ್ನು ಕಂಡು ಹಿಡಿಯಿರಿ.

$$\text{ಓದಿನ ವೇಗ} = \frac{400}{100} \times 60$$

$$\text{ಓದಿನ ವೇಗ} = \frac{400}{100} \times \frac{60}{1}$$

$$= \frac{400 \times 60}{100} = 240 \therefore \text{ಓದಿನ ವೇಗ ನಿಮಿಷಕ್ಕೆ 240 ಪದಗಳು}$$

## ಓದುಗಾರಿಕೆ ಕಲಿಸುವ ಪದ್ಧತಿ

- ವರ್ಣಮಾಲಾ ಪದ್ಧತಿ
- ಪದಮಾಲಾ ಪದ್ಧತಿ
- ನೋಡಿ ಹೇಳುವ ಪದ್ಧತಿ
- ವಾಕ್ಯ ಪದ್ಧತಿ
- ಕಥಾ ಪದ್ಧತಿ

Scanned with CamScanner

## ಓದುಗಾರಿಕೆಯಲ್ಲಿ ಕಂಡು ಬರುವ ದೋಷಗಳು

- ತೋರು ಬೆರಳನ್ನಿಟ್ಟು ಬೇರೇನೋ ಯೋಚಿಸುತ್ತ ಓದುವುದು.
- ಅಕ್ಷರಗಳನ್ನು ಅಸ್ಪಷ್ಟವಾಗಿ ಉಚ್ಚರಿಸುವುದು ಹಾಗೂ ಪದಗಳನ್ನು ನುಂಗುತ್ತಾ ಓದುವುದು.
- ವ್ಯಾಕರಣ ಮತ್ತು ಲೇಖನ ಚಿಹ್ನೆಗಳನ್ನು ಅಳವಡಿಸಿಕೊಳ್ಳದೇ ಓದುವುದು.
- ಅತೀ ವೇಗವಾಗಿ, ಅಸ್ಪಷ್ಟವಾಗಿ, ನಿಲುಗಡೆಯಿಲ್ಲದೆ ಓದುವುದು.
- ಪ್ರತಿಯೊಂದು ಅಕ್ಷರ ಮತ್ತು ಪದಗಳನ್ನು ಬಿಡಿಬಿಡಿಯಾಗಿ ನೋಡುವುದು.

## ಓದುಗಾರಿಕೆ ದೋಷಗಳಿಗೆ ಪರಿಹಾರಗಳು

- ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಮೂಡಿಸಿ, ಓದಲು ಸಿದ್ಧಗೊಳಿಸಿ, ಓದಲು ಪ್ರೇರೇಪಿಸುವುದು.
- ಅರ್ಥ ಗ್ರಹಿಕೆಗಾಗಿ ಓದುವ ವಿವಿಧ ಕೌಶಲಗಳು ಮತ್ತು ಸಾಮರ್ಥ್ಯಗಳ ಬಗೆಗೆ ಅಭ್ಯಾಸ ಮಾಡಿಸುವುದು.
- ಓದುವ ಕೌಶಲಗಳ ಬಗೆಗೆ ಸೂಕ್ತ ತರಬೇತಿ ಮತ್ತು ನಿರಂತರ ಅಭ್ಯಾಸಗಳನ್ನು ನೀಡಬೇಕು.
- ವ್ಯಾಕರಣಾಂಶಗಳು ಲೇಖನ ಚಿಹ್ನೆಗಳನ್ನು ಅಳವಡಿಸಿಕೊಂಡು ಓದುವ ಕ್ರಮ ಬೆಳೆಸುವುದು.

## 4. ಬರವಣಿಗೆ



ಬರವಣಿಗೆ ಎಂದರೆ, ತಾನು ತಿಳಿದಿದ್ದನ್ನು ಅಥವಾ ಇನ್ನೊಬ್ಬರು ಹೇಳಿದುದನ್ನು ಗೊತ್ತಾದ ಲಿಪಿಯನ್ನು ಬಳಸಿಕೊಂಡು ಬೆರಳುಗಳ ಮೂಲಕ ವ್ಯಕ್ತಪಡಿಸುವಂತದ್ದು. ಬಾಯಲ್ಲಿ ಅಕ್ಷರಗಳು ಉಚ್ಚಾರಣೆಯಾದಾಗ ಅದು ಓದಾದರೆ, ಕೈಯ ಸ್ನಾಯುಗಳ ಬಲದಿಂದ ಅಕ್ಷರಗಳು ಉಚ್ಚಾರಣೆಯಾಗುವುದನ್ನು ಬರವಣಿಗೆ ಎಂದು ಕರೆಯುತ್ತೇವೆ.

### ಉತ್ತಮ ಕೈಬರಹದ ಲಕ್ಷಣಗಳು

1) ಸುಸ್ಪಷ್ಟತೆ 2) ಗಾತ್ರ 3) ಅಂತರ
4) ಲೇಖನ ಚಿಹ್ನೆ 5) ವೇಗ 6) ಸ್ಥಿರತೆ

**ಬರವಣಿಗೆಯ ಮಹತ್ವ:** ಬರವಣಿಗೆ ಕುರಿತು ಕನ್ನಡದ ದಾರ್ಶನಿಕ ಕವಿ ಸರ್ವಜ್ಞ ಮಾರ್ಮಿಕವಾಗಿ ಹೀಗೆ ಹೇಳಿದ್ದಾನೆ:

**ಬರೆಯದೆ ಓದುವವನ**
**ಕರೆಯದೆ ಬರುವವನ**
**ಬರಿಗಾಲಲ್ಲಿ ನಡೆಯುವವನ**
**ಕರೆದು ಕೆರದಲಿ ಹೊಡೆಯೆಂದ ಸರ್ವಜ್ಞ॥**

## ಬರವಣಿಗೆ ಮಹತ್ವ

- ಬರಹದಿಂದ ಸ್ಮರಣ ಶಕ್ತಿ ಹೆಚ್ಚುತ್ತದೆ. ಬರಹವು ವ್ಯವಹಾರ ಮಾಧ್ಯಮವಾಗಿ ಪಾತ್ರವಹಿಸುತ್ತದೆ.
- ಬರಹ ಮನೋಸ್ಥೈರ್ಯ, ವಿವೇಚನೆ, ಜ್ಞಾನಾರ್ಜನೆಗೆ ಸಹಾಯಕ–ವಾಗುತ್ತದೆ.
- ಮಾನಸಿಕ ವಿಕಾಸಕ್ಕೆ, ತಾರ್ಕಿಕ ಚಿಂತನೆಗೆ, ಸೃಜನಶೀಲತೆಗೆ ಸಾಹಿತ್ಯಾಸಕ್ತಿ ಮತ್ತು ಅಧ್ಯಯನಕ್ಕೆ ಬರವಣಿಗೆಯ ಸಾಮರ್ಥ್ಯ ಬೆಂಬಲ ನೀಡುತ್ತದೆ.
- ಸಂಸ್ಕೃತಿ ವಿಕಾಸ ಹಾಗೂ ಪ್ರಸಾರಕ್ಕೆ ಪೂರಕವಾಗುತ್ತದೆ. ಸಾಹಿತ್ಯ ಸೃಷ್ಟಿ, ಅಧ್ಯಯನ ಮತ್ತು ಸಾಹಿತ್ಯ ಪ್ರಸಾರಕ್ಕೆ ಸಹಾಯಕವಾಗುತ್ತದೆ.

## ಕೈಬರಹದ ಕೌಶಲಗಳು



ಕೈ ಬರಹ ಪ್ರಕ್ರಿಯೆಯಲ್ಲಿ ಈ ಕೆಳಕಂಡ ಕೌಶಲಗಳು ಸಾಮರಸ್ಯ ಮತ್ತು ಸಮನ್ವಯದಿಂದ ಕೂಡಿ ಕೆಲಸ ಮಾಡಬೇಕು.

1. ಸ್ನಾಯು ಕೌಶಲಗಳು
2. ಚಾಕ್ಷುಷ ಕೌಶಲಗಳು
3. ಮಾನಸಿಕ ಕೌಶಲಗಳು
4. ರೇಖಾವಿನ್ಯಾಸ ಕೌಶಲಗಳು
5. ವಾಕ್ಯ ರಚನೆಯ ಕೌಶಲಗಳು
6. ಕಾಗುಣಿತ ರೇಖಾ ವಿನ್ಯಾಸ ಕೌಶಲಗಳು
7. ಅಕ್ಷರ ಮತ್ತು ಅಕ್ಷರ ಜೋಡಣೆಯ ಕೌಶಲಗಳು
8. ವರ್ಣವಿನ್ಯಾಸ ಕೌಶಲಗಳು/ ರೇಖಾ ವಿನ್ಯಾಸ ಕೌಶಲಗಳು

**ಕಾಗುಣಿತ ಮಹತ್ವ:** ಬರಹ ಮತ್ತು ಕಾಗುಣಿತಕ್ಕೆ ನಿಕಟ ಸಂಬಂಧವಿದೆ. ಕಾಗುಣಿತವು ಒಂದು ಬರಹಕ್ಕೆ ಜೀವ ನೀಡುವುದು. ಬರವಣಿಗೆಯು ಕಾಗುಣಿತದ ಶುದ್ಧತೆಯನ್ನು ಅವಲಂಬಿಸಿರುತ್ತದೆ. ವಿಷಯಗಳನ್ನು ಓದಲು, ಅರ್ಥಮಾಡಿಕೊಳ್ಳಲು, ಅಲ್ಲಿನ ಭಾವನೆಗಳನ್ನು ಸ್ವೀಕರಿಸಲು, ದೀರ್ಘಕಾಲ ಓದಲು ನೆರವಾಗುತ್ತದೆ.

## ಕಾಗುಣಿತ ದೋಷಗಳು ಮತ್ತು ಕಾಗುಣಿತ ದೋಷಗಳಿಗೆ ಕಾರಣಗಳು

- ಪ್ರತಿ ಅಕ್ಷರದ ತಲಗಟ್ಟು, ಏತ್ವ, ದೀರ್ಘ, ಕೊಂಬು, ಐತ್ವ, ಅರ್ಕಾವತ್ತು, ಅರ್ಧಾಕ್ಷರ ಚಿಹ್ನೆ ಮೊದಲಾದವುಗಳನ್ನು ಸರಿಯಾಗಿ ಸೇರಿಸದೇ ಬರೆಯುವುದು.
- ಅಲ್ಪಪ್ರಾಣ, ಮಹಾಪ್ರಾಣ, ದೀರ್ಘಾಕ್ಷರ, ಸಂಯುಕ್ತಾಕ್ಷರಗಳನ್ನು ಕ್ರಮವಾಗಿ ಬರೆಯದಿರುವುದು. ವರ್ಣಗಳ ವಿನ್ಯಾಸ ತಿಳಿಯದಿರುವುದು.
- ಕಾಗುಣಿತ ರೇಖೆಗಳನ್ನು ಬರೆಯುವ ಅಭ್ಯಾಸ ರೂಢಿ ಇಲ್ಲದಿರುವಿಕೆ.

## ಕಾಗುಣಿತ ದೋಷಗಳ ನಿವಾರಣೋಪಾಯಗಳು

- ಅಕ್ಷರಗಳಿಗೆ ಒತ್ತು, ತಲೆಗಟ್ಟು, ಏತ್ವ, ಕೊಂಬು ಮುಂತಾದವುಗಳ ಕುರಿತು ಹೆಚ್ಚಿನ ಅಭ್ಯಾಸ ಮಾಡಿಸುವುದು.
- ಕಾಗುಣಿತವಿರುವ ಪದಗಳನ್ನು, ವಾಕ್ಯಗಳನ್ನು ಬರೆಸಿ ರೂಢಿ ಮಾಡಿಸುವುದು.
- ಲೇಖನಿ ಹಿಡಿಯುವ ಕ್ರಮ ತಿಳಿಸುವುದು.
- ವರ್ಗಕೋಣೆಯಲ್ಲಿ ಕಾಗುಣಿತದ ಚಾರ್ಟ್‌ಗಳನ್ನು ತೂಗುಹಾಕುವುದು.

## ಅಕ್ಷರ ಮತ್ತು ಪದ ಜೋಡಣಾ ಕ್ರಮದಲ್ಲಿಯ ದೋಷಗಳು

- ಅಕ್ಷರಗಳನ್ನು ಅವುಗಳ ಮೂಲರೂಪಕ್ಕೆ ಅನುಗುಣವಾಗಿ ಬರೆಯದಿರುವುದು.
- ಅಕ್ಷರಗಳನ್ನು ಒತ್ತೊತ್ತಾಗಿ ಅಂತರವಿಡದೆ ಬರೆಯುವುದು.
- ಅಕ್ಷರಗಳ ಒತ್ತುಗಳನ್ನು ಅಸ್ತವ್ಯಸ್ತವಾಗಿ ಬರೆಯುವುದು.
- ಒಂದು ಪದವನ್ನು ಒಡೆದು ಹೆಚ್ಚಿನ ಅಂತರದಲ್ಲಿ ಬರೆಯುವುದು.

## ಅಕ್ಷರ ಮತ್ತು ಪದ ಜೋಡಣಾ ಕ್ರಮದಲ್ಲಿಯ ದೋಷಗಳಿಗೆ ಕಾರಣಗಳು

- ಒತ್ತಕ್ಷರಗಳು, ಸಂಯುಕ್ತಾಕ್ಷರಗಳು, ಅರ್ಧಾಕ್ಷರಗಳ ಜ್ಞಾನದ ಕೊರತೆ.
- ಕಾಪಿ ಪುಸ್ತಕ ಬರೆಯದೇ ಇರುವುದು; ಅನಾಸಕ್ತಿಯಿಂದ ಬರೆಯುವುದು.
- ರೇಖಾ ವಿನ್ಯಾಸಗಳನ್ನು ಮೂಡಿಸುವ ನೈಪುಣ್ಯತೆ ಇಲ್ಲದಿರುವುದು.
- ಶಬ್ದ ಭಂಡಾರದ ಕೊರತೆ.
- ಶ್ರವಣ ದೋಷ ಮತ್ತು ಕಣ್ಣಿನ ದೋಷ.

Scanned with CamScanner

### ಅಕ್ಷರ ಮತ್ತು ಪದ ರಚನೆಯಲ್ಲಾಗುವ ದೋಷಗಳಿಗೆ ಪರಿಹಾರಗಳು

- ಮಕ್ಕಳ ಶಬ್ದ ಭಂಡಾರವನ್ನು ಬೆಳೆಸಬೇಕು. ಮಕ್ಕಳಿಗೆ ಪರಿಚಯವಿರುವ ಪದಗಳಿಂದ ವಾಕ್ಯ ಮಾಡಿಸಿ ಬರೆಸುವುದು. ನೋಡಿ ಬರಹ, ಕೇಳಿ ಬರಹ, ಕಾಪಿ ಬರಹ, ಮಾದರಿ ಬರಹಗಳಿರುವ ಚಿತ್ರಪಟಗಳು ಮತ್ತು ಸಚಿತ್ರ ಪುಸ್ತಕಗಳನ್ನು ನೋಡಿ ಬರೆಯುವುದಕ್ಕೆ ಅವಕಾಶ ನೀಡಬೇಕು. ಲೇಖನ ಚಿಹ್ನೆಗಳನ್ನು ಸಮರ್ಪಕವಾಗಿ ಹಾಕುವುದು.

### ಕನ್ನಡ ಲಿಪಿಯ ಗುಣಲಕ್ಷಣಗಳು

- ಕನ್ನಡ ಲಿಪಿಯಲ್ಲಿ ಸ್ವರಗಳು ಅಂದರೆ ಹ್ರಸ್ವ ಮತ್ತು ದೀರ್ಘಸ್ವರಗಳು, ವ್ಯಂಜನಗಳು, ಅಲ್ಪಪ್ರಾಣ, ಮಹಾಪ್ರಾಣ, ಅನುಸ್ವಾರ ಮತ್ತು ವಿಸರ್ಗಗಳ ಸ್ವರೂಪವಿದೆ.
- ಕನ್ನಡ ಅಕ್ಷರಗಳು ಸಾಮಾನ್ಯವಾಗಿ ವೃತ್ತ, ಅರ್ಧವೃತ್ತ, ಉದ್ದಗೆರೆ, ಅಡ್ಡ ಗೆರೆಗಳ ರೇಖಾ ವಿನ್ಯಾಸದಿಂದಲೇ ರಚನೆಯಾಗಿವೆ. ವಿಷಯದ ಸ್ವರೂಪಕ್ಕೆ ಅನುಗುಣವಾಗಿ ಒತ್ತಕ್ಷರಗಳನ್ನು ಬಳಸಲಾಗುತ್ತದೆ.

**ಬರವಣಿಗೆ ಕಲಿಸುವ ವಿಧಾನಗಳು** • ನೋಡಿ ಬರಹ • ಕಾಪಿ ಬರೆಸುವುದು (ನಕಲು ಬರಹ)

**ಲೇಖನ ಚಿಹ್ನೆಗಳು:** ಕನ್ನಡ ಭಾಷಾ ವಿಷಯದಲ್ಲಿ ಓದು, ಬರಹದಲ್ಲಿ ಬಳಸುತ್ತಿರುವ ಲೇಖನ ಚಿಹ್ನೆಗಳನ್ನು ಬರೆಯುವ ಕ್ರಮ, ಅಳವಡಿಸುವ ಸಂದರ್ಭಗಳನ್ನು ತಿಳಿದುಕೊಳ್ಳಬೇಕಾದುದು ಅವಶ್ಯಕವಾಗಿದೆ.

| ಚಿಹ್ನೆಗಳು | ಗುರುತಿಸುವ ಬಗೆ |
|---|---|
| ಪೂರ್ಣ ವಿರಾಮ ಚಿಹ್ನೆ | . |
| ಅಲ್ಪ ವಿರಾಮ ಚಿಹ್ನೆ | , |
| ಅರ್ಧ ವಿರಾಮ ಚಿಹ್ನೆ | ; |
| ವಿವರಣಾತ್ಮಕ ಚಿಹ್ನೆ | : |
| ಪ್ರಶ್ನಾರ್ಥಕ ಚಿಹ್ನೆ | ? |
| ಭಾವಸೂಚಕ ಚಿಹ್ನೆ | ! |
| ಉದ್ಧರಣ ಚಿಹ್ನೆ | " " |
| ಆವರಣ ಚಿಹ್ನೆಗಳು | ( ), [ ], { } |
| ಸಂಯೋಜಕ ಮತ್ತು ವಿಭಜಕ ಚಿಹ್ನೆ | - |
| ಅಡ್ಡಗೆರೆ | --- |
| ಸಾಲಿನ ಅಡಿಗೆರೆ | ______ |

## ಬೋಧನಾ ವಿಧಾನಗಳು (Teaching Methods)

### 1) ಕ್ರೀಡಾ ಪದ್ಧತಿ (Play Method)

ಕ್ರೀಡಾ ಪದ್ಧತಿಯು ಚಟುವಟಿಕೆ ಕೇಂದ್ರಿತ ಆಧುನಿಕ ಬೋಧನಾ ಪದ್ಧತಿಯಾಗಿದೆ. ಕೆಲಸ ಮಾಡುತ್ತಾ ಕಲಿ ಆಡುತ್ತಾ ಕಲಿ ಮತ್ತು ಪಾಲ್ಗೊಂಡು ಕಲಿ; ಎಂಬ ವೈಜ್ಞಾನಿಕ ತತ್ವದ ತಳಹದಿಯಲ್ಲಿ ಕ್ರೀಡಾ ಪದ್ಧತಿಯು ಬೆಳೆದು ಬಂದಿದೆ.

#### ಕ್ರೀಡಾ ಪದ್ಧತಿಯ ಗುಣಗಳು

- ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸು ರೂಪಗೊಳ್ಳುವುದು ಎಂಬಂತೆ ಚಟುವಟಿಕೆಗಳು ಮಕ್ಕಳ ದೈಹಿಕ ಹಾಗೂ ಮಾನಸಿಕವಾಗಿ ವಿಕಾಸ ಹೊಂದಲು ಸಹಾಯಕವಾಗುತ್ತವೆ.
- ಕ್ರೀಡೆಗಳು ಮಕ್ಕಳ ರಚನಾತ್ಮಕ ಸಾಮರ್ಥ್ಯವನ್ನು ಉತ್ತೇಜಿಸಿ ಅವರಲ್ಲಿ ಅಡಗಿರುವ ಸುಪ್ತ ಚೇತನವನ್ನು ಹೊರಸೆಳೆಯುತ್ತವೆ.

#### ಕ್ರೀಡಾ ಪದ್ಧತಿಯಿಂದ ಭಾಷಾ ಬೆಳವಣಿಗೆ

- ಭಾಷೆಯ ಬೋಧನೆಯಲ್ಲಿ ಶಿಕ್ಷಕನು ನಾಟಕೀಕರಣ, ಕಥೆ, ಕಾವ್ಯ, ಸಾಹಿತ್ಯಾತ್ಮಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಕ್ರೀಡಾ ಪದ್ಧತಿಯ ರೂಪದಲ್ಲಿ ಹಲವಾರು ಚಟುವಟಿಕೆಗಳ ಮೂಲಕ ಕಲಿಸಲು ಅವಕಾಶವುಂಟು.
- ಈ ಹಂತದಲ್ಲಿ ಶಿಕ್ಷಕ ಗುಂಪು ಹಾಡು, ರಂಗದ ಮೇಲಿನ ಆಟಗಳು, ಒಗಟು ಬಿಡಿಸುವಿಕೆ, ಸಂಗೀತ, ಸಾಹಿತ್ಯಾತ್ಮಕ ಸ್ಪರ್ಧೆ, ಸಾಮೂಹಿಕ ನಾಟಕ, ಕಿರುನಾಟಕ, ಏಕಪಾತ್ರಾಭಿನಯ, ಪದಬಂಧ ರಚನೆ, ಕೆಣುಕು– ತಿಣುಕು, ಮೆದುಳಿಗೆ ಕೆಲಸ ನೀಡುವ ಆಟಗಳು, ಸ್ಪರ್ಧೆಗಳು, ಅಂತ್ಯಾಕ್ಷರಿ, ಪರ್ಯಾಯ ಪದ, ವಿರುದ್ಧಾರ್ಥಕ ಪದ, ಭಾಷಣ, ಚರ್ಚಾಗೋಷ್ಠಿ ಮೊದಲಾದ (ಒಟ್ಟು ಭಾಷೆಯ ಬೆಳವಣಿಗೆಗೆ ಸಹಕಾರಿಯಾಗುವಂತಹ) ಚಟುವಟಿಕೆಗಳನ್ನು ಆಗಾಗ ಹಮ್ಮಿಕೊಳ್ಳ ಬೇಕು.
- ಕ್ರೀಡಾ ಮೇಳಗಳನ್ನು ಸಂಘಟಿಸಿ ಅವುಗಳ ವಿವರ ಮಾಹಿತಿ ಬರೆಸುವುದು, ಸಂವಹನ ಕೌಶಲ, ಸ್ಮರಣ ಶಕ್ತಿ ಬೆಳೆಸುವ ಕ್ರೀಡೆಗಳನ್ನು ಆಗಾಗ ಹಮ್ಮಿಕೊಳ್ಳುವುದರ ಮೂಲಕ ಮಗುವಿನ ಭಾಷಾ ಬೆಳವಣಿಗೆಗೆ ಪ್ರಯತ್ನಿಸಬೇಕು.




#### ಕ್ರೀಡಾ ಪದ್ಧತಿಯ ಪ್ರಯೋಜನ

- ಇದು ವಿದ್ಯಾರ್ಥಿ ಕೇಂದ್ರಿತ ಪದ್ಧತಿಯಾಗಿದೆ.
- ಇಲ್ಲಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಬ್ಬರೂ ಚಟುವಟಿಕೆಯುಕ್ತವಾಗಿ ಕ್ರಿಯಾಶೀಲರಾಗಿರುತ್ತಾರೆ.
- ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುತ್ತದೆ.
- ತಾರ್ಕಿಕ ಹಾಗೂ ವೈಚಾರಿಕತೆಯನ್ನು ಉಂಟುಮಾಡುತ್ತದೆ.
- ಮಕ್ಕಳಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳ ಬಗ್ಗೆ ಅರಿವು ಮೂಡಿಸುತ್ತದೆ.

### 2) ಮಾಂಟೆಸ್ಸರಿ ಪದ್ಧತಿ (Montessori Method)

ಸುಪ್ತ ಚೇತನಗಳ ಸ್ವಾಭಾವಿಕ ವಿಕಾಸಕ್ಕೆ ನೀಡುವ ಕ್ರಿಯಾಶೀಲ ಸಹಾಯ ಉತ್ತೇಜನವೇ ಶಿಕ್ಷಣ ಎಂದು ಪ್ರತಿಪಾದಿಸಿದವರು ಮೇಡಂ ಮರಿಯಾ ಮಾಂಟೆಸ್ಸರಿ. ಮೇರಿಯಾ ಮಾಂಟೆಸ್ಸರಿ ಇಟಲಿಯ ಮಾರ್ಕ ಪ್ರಾಂತ್ಯದ ಚೈರವೆಲ್ಲೆ ಎಂಬಲ್ಲಿ ಅಗಸ್ಟ್ 31, 1870ರಲ್ಲಿ ಜನಿಸಿದರು.

ದೈಹಿಕ ಹಾಗೂ ಮಾನಸಿಕ ದೌರ್ಬಲ್ಯಕ್ಕೆ ಜ್ಞಾನೇಂದ್ರಿಯಗಳ ಸೂಕ್ತ ಕಾರ್ಯನಿರ್ವಹಣೆಯ ಕೊರತೆಯೇ ಮುಖ್ಯ ಕಾರಣವೆಂದು ಮನಗಂಡ ಅವರು ಬುದ್ಧಿಮಾಂದ್ಯ ಮಕ್ಕಳಿಗೆ ಜ್ಞಾನೇಂದ್ರಿಯಗಳ ಶಿಕ್ಷಣ ನೀಡಿದರು.

#### ಮಾಂಟೆಸ್ಸರಿ ಶಿಕ್ಷಣದ ತತ್ವಗಳು

1) ಶಿಕ್ಷಣವು ಬೆಳವಣಿಗೆಯ ಸಾಧನ
2) ಶಿಕ್ಷಣದಲ್ಲಿ ಸ್ವಾತಂತ್ರ್ಯ
3) ವ್ಯಕ್ತಿತ್ವದ ವಿಕಾಸ
4) ಸ್ವ ಶಿಕ್ಷಣದ ತತ್ವ
5) ಜ್ಞಾನೇಂದ್ರಿಯಗಳ ತರಬೇತಿ

Scanned with CamScanner

### ಮಾಂಟೆಸ್ಸರಿ ಪದ್ಧತಿ ಮೂಲಕ ಭಾಷಾ ಬೆಳವಣಿಗೆ

- ಮಗು ಮಾತು ಮತ್ತು ಓದಿಗಿಂತ ಮೊದಲು ಬರವಣಿಗೆಯನ್ನು ಕಲಿಯುತ್ತದೆ.
- ಬರವಣಿಕೆಗೆಯು ಇಂದ್ರಿಯ ಚಟುವಟಿಕೆಗೆ ಸಂಬಂಧಿಸಿದ್ದು, ಕೈಬೆರಳುಗಳ ಜೊತೆಗೆ ಸ್ಪರ್ಶ ಇಂದ್ರಿಯಗಳು ಬಲಗೊಳ್ಳುವಂತೆ ಮಾಡಬೇಕು.
- ಒರಟಾದ ಕಾರ್ಡುಗಳು, ಅಕ್ಷರಗಳ ವಿವಿಧ ಮಾದರಿಗಳು, ಹಲಗೆಯ ಮೇಲೆ ಅಕ್ಷರಗಳನ್ನು ಕೊರೆದಿರುವ ಸಲಕರಣೆಗಳನ್ನು ಮಕ್ಕಳಿಗೆ ಕೊಟ್ಟರೆ ಅವರು ಅಕ್ಷರಗಳ ಮಾದರಿ ರಚನೆಯನ್ನು ಸ್ಪರ್ಶಿಸುತ್ತಾ ಅಕ್ಷರಗಳ ರಚನೆಯನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಮನದಟ್ಟು ಮಾಡಿಕೊಳ್ಳುತ್ತಾರೆ.

### ಓದುಗಾರಿಕೆ ಕಲಿಸುವ ಕ್ರಮ

- ನೋಡಿ ಓದುವ ಕ್ರಮಗಳಿಂದ ಓದುಗಾರಿಕೆಯನ್ನು ಕಲಿಸಬೇಕೆಂದು ಮಾಂಟೆಸ್ಸರಿ ಸಲಹೆ ಮಾಡಿದರು.
- ವಿವಿಧ ರೀತಿಯ ಸೂಚನಾ ಫಲಕಗಳನ್ನು, ಬೋರ್ಡುಗಳನ್ನು ಮಕ್ಕಳ ಗಮನಕ್ಕೆ ತರುವುದು ವಿಭಿನ್ನ ಪದಗಳನ್ನು ಬರೆದಿರುವ ರಟ್ಟಿನ ಕಾಗದಗಳನ್ನು ತಯಾರಿಸಿ ಅವುಗಳಿಗೆ ಸಂಬಂಧಿಸಿದ ಶಬ್ದಗಳನ್ನು ಮಕ್ಕಳಿಂದ ಹೇಳಿಸುವುದರಿಂದ ಅವರು ಉಚ್ಚಾರಣೆ ಹಾಗೂ ಲಿಪಿಯಲ್ಲಿರುವ ವ್ಯತ್ಯಾಸವನ್ನು ತಿಳಿಯುತ್ತಾರೆ.
- ಇದರಿಂದಾಗಿ ಪುಸ್ತಕದಲ್ಲಿರುವ ವಿಚಾರಗಳನ್ನು ಭಾವಪೂರ್ಣವಾಗಿ ಓದುವುದು ಅಭ್ಯಾಸವಾಗುತ್ತದೆ. ಇದರೊಂದಿಗೆ ಮಾತುಗಾರಿಕೆ ಸ್ಫುಟಗೊಳ್ಳುತ್ತದೆ.

### 3) ಕಿಂಡರ್ ಗಾರ್ಟನ್ ಪದ್ಧತಿ

1827ರಲ್ಲಿ ಜರ್ಮನಿಯ ಬ್ಲ್ಯಾಕನ್‌ಬರ್ಗ್‌ನಲ್ಲಿ ಜರುಗಿದ ಕಿಂಡರ್ ಗಾರ್ಟನ್ ಎಂಬ ಶಾಲೆಯನ್ನು ಫ್ರೆಡರಿಕ್ ಪ್ರೊಬೆಲ್ ಸ್ಥಾಪಿಸಿದರು. ಶಾಲೆ ಎನ್ನುವುದು ತೋಟವಿದ್ದಂತೆ. ಮಕ್ಕಳೆಂದರೆ ಸಸಿಗಳು. ಶಿಕ್ಷಕನೆಂದರೆ ಸಸಿಗಳನ್ನು ಬೆಳೆಸುವ ತೋಟಗಾರನಿದ್ದಂತೆ.

### ಕಿಂಡರ್ ಗಾರ್ಟನ್ ಪದ್ಧತಿಯ ಶೈಕ್ಷಣಿಕ ತತ್ವ

- ಮಕ್ಕಳಿಗೆ ಕೊಡುವ ಜ್ಞಾನ ಸ್ವಾಭಾವಿಕವಾಗಿರಬೇಕು.
- ಶಾಲೆ ಎಂಬುದು ಸಮಾಜವಿದ್ದಂತೆ. ಮಕ್ಕಳು ಗುಂಪುಗೂಡಿ ಆಡುವುದರಿಂದ ಸಮಾಜದಲ್ಲಿನ ಜವಾಬ್ದಾರಿಯನ್ನು ಅರಿಯುತ್ತಾರೆ
- ಕೆಲಸ ಮತ್ತು ಆಟಗಳ ಮುಖಾಂತರ ಜ್ಞಾನ ಸಂಪಾದನೆ ಮಾಡುವುದು.
- ಮಕ್ಕಳ ಶಿಕ್ಷಣವು ಮಕ್ಕಳ ಬೆಳವಣಿಗೆಯ ತತ್ವವನ್ನು ಅನುಸರಿಸಬೇಕು.

### 4) ನಾಟಕೀಕರಣ ಪದ್ಧತಿ

ಅಭಿನಯ/ ರೂಪಕ ಪದ್ಧತಿಯೆಂತಲೂ ಕರೆಯುತ್ತಾರೆ. ಭಾಷಾ ಬೋಧಕ ಹಾವಭಾವದೊಂದಿಗೆ ವಿಷಯಕ್ಕೆ ತಕ್ಕಂತೆ ಔಚಿತ್ಯಪೂರ್ಣವಾಗಿ ಅಭಿವ್ಯಕ್ತಪಡಿಸುವುದಕ್ಕೆ ನಾಟಕೀಕರಣ ಎಂದು ಕರೆಯುತ್ತಾರೆ. ಭಾವಭಂಗಿ, ಮುಖಚರ್ಯೆ, ಚಲನವಲನಗಳು, ಶಾರೀರಿಕ ನಿಲುವು, ಅನುಕರಣೆ, ಸ್ಪಷ್ಟ ಧ್ವನಿ, ಮಾತಿನ ವೈಖರಿಯನ್ನು ಉಪಯೋಗಿಸಿಕೊಂಡು ಬೋಧಿಸಬೇಕು.

### ನಾಟಕೀಕರಣದ ಪ್ರಯೋಜನಗಳು

- ಒಂದು ಕಥೆಯ ಸಾರಾಂಶವನ್ನು ಅಭಿನಯಿಸುವ ಮುಖಾಂತರ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.
- ಪದ್ಧತಿಯಿಂದ ಮಕ್ಕಳು ಅನುಕರಣ ಶಕ್ತಿಯನ್ನು ಬೆಳೆಸಿಕೊಳ್ಳುವರು.
- ಮಕ್ಕಳು ಪೌರಾಣಿಕ ಹಾಗೂ ಐತಿಹಾಸಿಕ ವ್ಯಕ್ತಿಗಳ ಪಾತ್ರವನ್ನಾಡುವುದರಿಂದ ಧೈರ್ಯ, ಸಾಹಸದ, ಸದ್ಗುಣಗಳು ಬೆಳೆಯುವವು.
- ಸ್ವ ನಿಯಂತ್ರಣ, ಮತ್ತು ಅಭಿವ್ಯಕ್ತಿಯವನ್ನು ಬೆಳೆಸಿಕೊಳ್ಳಲು ಮಕ್ಕಳಿಗೆ ಸಹಾಯವಾಗುತ್ತದೆ.

### 5) ಯೋಜನಾ ಪದ್ಧತಿ (Project Method)

ಈ ಪದ್ಧತಿಯು ಶೈಕ್ಷಣಿಕ ಸಿದ್ಧಾಂತ ಮತ್ತು ರೀತಿಗೆ ಆಧುನಿಕ ಕೊಡುಗೆಯಾಗಿದೆ. ಇದು ಅಮೆರಿಕಾ ದೇಶದ ಶ್ರೇಷ್ಠ ಶಿಕ್ಷಣ ತಜ್ಞರಾದ ಜಾನ್ ಡ್ಯೂಯಿಯವರ ಪ್ರಗತಿವಾದದ ಫಲವಾಗಿದೆ. ಶಾಲೆಗಳಲ್ಲಿ ನೀಡುವ ಜ್ಞಾನವು ನೈಜ ಜೀವನದ ಸನ್ನಿವೇಶಗಳೊಂದಿಗೆ ಸಂಬಂಧವನ್ನು ಹೊಂದಿರಬೇಕು. ಯೋಜನಾ ಪದ್ಧತಿಯನ್ನು ಅನುಷ್ಠಾನಕ್ಕೆ ತಂದ ಮೊಟ್ಟ ಮೊದಲ ಕೀರ್ತಿ ಕಿಲ್ ಪ್ಯಾಟ್ರಿಕ್ ಅವರಿಗೆ ಸಲ್ಲುತ್ತದೆ.

### ವ್ಯಾಖ್ಯೆಗಳು

- 'ಸಾಮಾಜಿಕ ಪರಿಸರದಲ್ಲಿ ನಡೆಯುವ ತುಂಬು ಹೃದಯದ ಉದ್ದೇಶಪೂರಿತ ಚಟುವಟಿಕೆಯೇ ಯೋಜನಾ ಪದ್ಧತಿ'.-ಕಿಲ್ ಪ್ಯಾಟ್ರಿಕ್
- 'ಯೋಜನೆಯು ನೈಜ ಜೀವನದ ತುಣುಕು ಅದನ್ನು ಶಾಲೆಯಲ್ಲಿ ಆಮದು ಮಾಡಿಕೊಳ್ಳಲಾಗುತ್ತದೆ'. – ಬಲ್ಲಾರ್ಡ್
- 'ಯೋಜನೆಯು ಸಮಸ್ಯಾತ್ಮಕ ಚಟುವಟಿಕೆಯಾಗಿದ್ದು ಅದು ತನ್ನ ಸಹಜ ಸಜ್ಜಿಕೆಯಲ್ಲಿ ಪೂರ್ಣಗೊಳ್ಳುತ್ತದೆ'. –ಸ್ಟಿವನ್‌ಸನ್

### ಯೋಜನಾ ಪದ್ಧತಿಯ ಲಕ್ಷಣಗಳು (Characteristics of Project Method)

1) ಇದು ಸಹಜ ಜೀವನದ ಚಟುವಟಿಕೆಗಳೊಂದಿಗೆ ಸಂಬಂಧಿಸಿರುತ್ತದೆ.
2) ಇದು ಉದ್ದೇಶಿತ ಚಟುವಟಿಕೆಗಳನ್ನು ತಿಳಿದುಕೊಳ್ಳಲು ಹಾಗೂ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಕೈಗೊಳ್ಳುವ ಚಟುವಟಿಕೆಯಾಗಿದೆ.

### ಯೋಜನಾ ಪದ್ಧತಿಯ ತತ್ವಗಳು (Principles of Project Method)

1) ಉದ್ದೇಶ ತತ್ವ
2) ಚಟುವಟಿಕೆಯ ತತ್ವ
3) ಸಹಜತೆಯ ತತ್ವ
4) ಅನುಭವ ತತ್ವ
5) ಉಪಯುಕ್ತತೆಯ ತತ್ವ

### ಯೋಜನಾ ಪದ್ಧತಿಯ ಮೆಟ್ಟಿಲುಗಳು (Steps of Project Method)

1) ಸನ್ನಿವೇಶ ಒದಗಿಸುವುದು
2) ಯೋಜನೆಯ ಆಯ್ಕೆ
3) ಉದ್ದೇಶಿಸುವುದು
4) ಯೋಜನೆ (Planning)
5) ಕಾರ್ಯಾಚರಣೆ (Execution)
6) ಮೌಲ್ಯಮಾಪನ (Evaluation)
7) ದಾಖಲೆ ಮಾಡುವುದು

### ಯೋಜನಾ ಪದ್ಧತಿಯ ಗುಣಗಳು

- ಇದು ಮನೋವೈಜ್ಞಾನಿಕವಾದುದು. ಥಾರ್ನ್‌ಡೈಕ್‌ನ ಸಿದ್ಧತಾ ನಿಯಮ, ಅಭ್ಯಾಸ ನಿಯಮ ಹಾಗೂ ಪರಿಣಾಮ ನಿಯಮ (ಇವು ಕಲಿಕಾ ನಿಯಮಗಳು)ಗಳನ್ನು ಅನುಸರಿಸಿದೆ.
- ವಿಷಯಗಳಲ್ಲಿ ಸಮಗ್ರತೆ ಇರುವುದರಿಂದ ವಿದ್ಯಾರ್ಥಿಗಳು ಇಡಿಯಾಗಿ ಕಲಿಯುವರು. ಇದರಿಂದ ವಿಷಯ – ವಿಷಯಗಳ ಮಧ್ಯೆ ಇರುವ ಪರಸ್ಪರ ಸಂಬಂಧದ ಕುರಿತು ಅರಿವು ಮೂಡುತ್ತದೆ.
- ಇದು ಸಹಕಾರ ತತ್ವವನ್ನು ಸೂಚಿಸುತ್ತದೆ. ವಿದ್ಯಾರ್ಥಿ– ವಿದ್ಯಾರ್ಥಿಗಳ ಮಧ್ಯೆ ಪರಸ್ಪರ ಸಹಾಯ, ಸಹಕಾರ ಮನೋಭಾವನೆ ಬೆಳೆಯುವುದು.
- ಜ್ಞಾನವು ಕೇವಲ ಪುಸ್ತಕೀಯವಲ್ಲ, ಪ್ರಾಯೋಗಿಕವಾಗಿಯೂ ಮತ್ತು ಅನುಭವ ಜನ್ಯವೂ ಹೌದು ಎಂಬುದು ಸ್ಪಷ್ಟವಾಗುತ್ತದೆ.

### ಯೋಜನಾ ಪದ್ಧತಿಯ ದೋಷಗಳು

- ಜ್ಞಾನವು ಬೇರ್ಪಡೆಗೊಂಡು ಬರುವುದು. ಚಟುವಟಿಕಾತ್ಮಕವಾಗಿ ಸಿಗುವ ಅನುಭವ ಬಹಳಷ್ಟು ಸನ್ನಿವೇಶಗಳಲ್ಲಿ ಪರಿಪೂರ್ಣವಾಗಿ ಲಭಿಸದು. ಭಾಷಾ ಬೋಧನೆಯ ಎಲ್ಲ ಪಾಠಗಳನ್ನು ಈ ಪದ್ಧತಿಯೊಂದೇ ಬೋಧಿಸಲು ಸಾಧ್ಯವಿಲ್ಲ.

Scanned with CamScanner

## 6) ಡಾಲ್ಟನ್ ಯೋಜನೆ (Dalton Plan)

ಮಕ್ಕಳಲ್ಲಿಯ ವೈಯಕ್ತಿಕ ಭಿನ್ನತೆಗೆ ಸರಿಹೊಂದುವಂಥ ಹೊಸ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದವರು ಹೆಲನ್ ಪಾರ್ಕ್‌ಹರ್ಸ್ಟ್. ಅವರು ಈ ಪ್ರಯೋಗಗಳನ್ನು ಡಾಲ್ಟನ್ ಪ್ರೌಢಶಾಲೆಯಲ್ಲಿ ಪ್ರಾರಂಭಿಸಿದ್ದರಿಂದ ಇದಕ್ಕೆ ಡಾಲ್ಟನ್ ಯೋಜನೆ ಎಂದು ಹೆಸರು ಬಂತು. ಈ ಯೋಜನೆಯು 8 ರಿಂದ 18 ವರ್ಷ ವಯೋಮಾನದ ಮಕ್ಕಳಿಗೆ ಅನುಗುಣವಾಗಿರುತ್ತದೆ.

### ಪ್ರಮುಖ ತತ್ವಗಳು

1) ವೈಯಕ್ತಿಕ ಕಾರ್ಯ 2) ಮುಕ್ತ ಸ್ವಾತಂತ್ರ್ಯ 3) ಸ್ವಯಂ ಪ್ರಯತ್ನ
4) ಸಹಕಾರ 5) ಮನೋವೈಜ್ಞಾನಿಕ ತತ್ವಗಳು

ಈ ಯೋಜನೆಯ ಪ್ರಕಾರ ಭಾಷಾ ಬೋಧಕನು ನಿಗದಿತ ವೇಳೆಯಲ್ಲಿ ಮಾಡಬೇಕಾದ ಅಭ್ಯಾಸದ ಘಟಕಗಳನ್ನು ತಯಾರಿಸುವನು. ವಿದ್ಯಾರ್ಥಿ ಶಿಕ್ಷಕರಿಂದ ಮಾರ್ಗದರ್ಶನ ಪಡೆಯುವನು.

### ಡಾಲ್ಟನ್ ಯೋಜನೆ ಗುಣಗಳು (Merits of Dalton Plan)

- ವ್ಯಕ್ತಿಗತ ಬೋಧನೆ
- ಅಭ್ಯಾಸ ಮಾಡುವ ಆಸಕ್ತಿ ಮೈಗೂಡುವುದು
- ಹೊಣೆಗಾರಿಕೆಯಿಂದ ಕಾರ್ಯನಿರ್ವಹಣೆ ಮತ್ತು ಶಿಸ್ತು ಪರಿಪಾಲನೆ

## 7) ಸಂಶೋಧನಾ ಪದ್ಧತಿ (Research Method):

ಇದು ವಿದ್ಯಾರ್ಥಿ ಕೇಂದ್ರಿತ ಪದ್ಧತಿಯಾಗಿದೆ. ಈ ಪದ್ಧತಿಯನ್ನು ಪ್ರೊ ಎಚ್ ಇ ಆರ್ಮಸ್ಟ್ರಾಂಗ್‌ರವರು ಕಂಡು ಹಿಡಿದರು.

**ಸಂಶೋಧನಾ ಪದ್ಧತಿಯು ವಿವಿಧ ಹಂತಗಳನ್ನು ಒಳಗೊಂಡಿದೆ–**

1) ಸಮಸ್ಯೆಗಳ ಗುರುತಿಸುವಿಕೆ 2) ಮಾಹಿತಿ ಕಲೆ ಹಾಕುವುದು 3) ಚರ್ಚೆ
4) ಪ್ರಯೋಗ 5) ಮಾರ್ಗದರ್ಶನ 6) ವಿಷಯ ಸಂಗ್ರಹಣೆ.

**ಕನ್ನಡ ವಿಷಯದಲ್ಲಿ ಸಂಶೋಧನಾತ್ಮಕ ಬೋಧನೆಗೆ ಈ ಕೆಳಕಂಡಂತೆ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು.**

- ಭಾಷಾ ಕೌಶಲ್ಯಾಭಿವೃದ್ಧಿ
- ಕನ್ನಡ ಸಾಹಿತ್ಯ ಚರಿತ್ರೆ
- ಕರ್ನಾಟಕ ಛಂದೋ ವಿಕಾಸ
- ಕನ್ನಡ ಭಾಷಾಭ್ಯಾಸ
- ಕನ್ನಡ ಭಾಷೆಯ ಹುಟ್ಟು ಹಾಗೂ ಬೆಳವಣಿಗೆ
- ಕನ್ನಡ ಕವಿಗಳ ಜೀವನ ಮತ್ತು ಸಾಧನೆ, ಕೃತಿಗಳು.
- ಮಾತುಗಾರಿಕೆ, ಬರವಣಿಗೆ ಹಾಗೂ ಓದುಗಾರಿಕೆ ದೋಷಗಳು

## 8) ಮೇಲ್ವಿಚಾರಣಾ ಪದ್ಧತಿ (Supervision Method)

- ಶಿಕ್ಷಕ ಮತ್ತು ಕಲಿಕಾರ್ಥಿ ತಮಗೆ ಹಂಚಿದ ಕೆಲಸದಲ್ಲಿ ನಿರತರಾದಾಗ ಯಾವುದಾದರೂ ಸಮಸ್ಯೆ ಎದುರಾದರಲ್ಲಿ ಅದನ್ನು ಪರಿಹರಿಸಿಕೊಳ್ಳಲು ಶಿಕ್ಷಕರಿಂದ ಸಹಾಯ, ಸಲಹೆ, ಮಾರ್ಗದರ್ಶನ ಕೇಳುವರು.
- 'ಒಂದು ಗುಂಪಿನ ಅಥವಾ ಒಂದು ತರಗತಿಯ ವಿದ್ಯಾರ್ಥಿಗಳು ತಮ್ಮ ಮೇಜಿನ ಮೇಲೆ ತಾವು ಕೆಲಸ ಮಾಡುತ್ತಿರುವಾಗ ಅದು ಶಿಕ್ಷಕನ ಮೇಲ್ವಿಚಾರಣೆ ನಡೆಯುತ್ತಿರುವ ಅಧ್ಯಯನವಾಗಿದೆ.'

– ಜೆನ್ನಿಂಗ್ ಮತ್ತು ಜೆನ್ನಿಂಗ್

### ಮೇಲ್ವಿಚಾರಣಾ ಪದ್ಧತಿಯ ಗುಣಗಳು (Merits of Supervised Study)

- ಪ್ರತಿಯೊಂದು ಮಗುವಿನ ಕಲಿಕೆಗೂ ಶಿಕ್ಷಕ ಗಮನಕೊಡುವುದರಿಂದ ಓದುವ ಪ್ರತಿ ಹಂತದಲ್ಲೂ ಹೊಸ ತಿರುವು ಲಭಿಸಬಹುದು.
- ಚಟುವಟಿಕೆ ಪ್ರಧಾನ ಹಾಗೂ ಸ್ವ–ಕಲಿಕೆಯ ಪದ್ಧತಿ ಇದಾಗಿರುವುದರಿಂದ ವಿದ್ಯಾರ್ಥಿ ಸ್ವತಃ ತಾನೇ ತನ್ನ ಪ್ರಗತಿಯ ಕುರಿತು ಅರಿವು ಹೊಂದುತ್ತಾನೆ.
- ಇಲ್ಲಿ ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಯನ್ನು ಗುರುತಿಸಿ ಕಲಿಸುವುದರಿಂದ ಕಲಿಕೆಯಲ್ಲಿ ಹಿಂದುಳಿದಿರುವ ಮಗುವಿನ ಕಲಿಕೆಗೆ ಹೆಚ್ಚು ಒತ್ತು ನೀಡಲು ಹಾಗೂ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸಲು ಸಾಧ್ಯವಾಗುತ್ತದೆ.

### ಮೇಲ್ವಿಚಾರಣಾ ಪದ್ಧತಿಯ ದೋಷಗಳು (Demerits of Supervised Study)

- ಈ ಪದ್ಧತಿಯಿಂದಾಗಿ ವರ್ಗದ ಇನ್ನಿತರ ಕೆಲಸಕ್ಕೆ ಅಡ್ಡಿಯಾಗುತ್ತದೆ. ಮನೆಪಾಠ ನಿರ್ಲಕ್ಷ್ಯಕ್ಕೀಡಾಗುತ್ತದೆ.
- ಸಂಪನ್ಮೂಲಗಳ ಅವಲಂಬನೆ ಈ ಪದ್ಧತಿಯಲ್ಲಿ ಇರುವುದರಿಂದ ಎಲ್ಲ ಶಾಲೆಗಳು ಸಾಮಾನ್ಯವಾಗಿ ಸೌಲಭ್ಯಗಳನ್ನು ಹೊಂದದೇ ಇರುವುದರಿಂದ ವಿದ್ಯಾರ್ಥಿಗಳು ಅನೇಕ ಸಂದರ್ಭದಲ್ಲಿ ನಿರೀಕ್ಷಿತ ಸೌಕರ್ಯಗಳನ್ನು ಪಡೆಯದೇ ಇರಬಹುದು.

## 9) ಚರ್ಚಾ ಪದ್ಧತಿ (Discussion Method)

ಬೇರೆಯವರ ಅಭಿಪ್ರಾಯಗಳನ್ನು ತೂಗಿನೋಡಿ ಅವುಗಳನ್ನು ಹಂಚಿಕೆ ಮಾಡಿ ಹಾಗೂ ಸಾಮೂಹಿಕ ನಿರ್ಧಾರ ಕೈಗೊಳ್ಳುವುದೇ ಚರ್ಚೆಯಾಗಿದೆ.

ಕಲಿಕೆಯಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿರುವುದರಿಂದ ಅದರಲ್ಲಿ ಅವರಿಗೆ ಚರ್ಚೆಗೆ ಮುಕ್ತ ಅವಕಾಶವಿದೆ. ಸಾಮೂಹಿಕ ಚಿಂತನೆ, ನಿರ್ಧಾರ ಕೈಗೊಳ್ಳುವುದು ಚರ್ಚೆಯ ಪ್ರಮುಖ ಉದ್ದೇಶಗಳಾಗಿವೆ.

### ಉತ್ತಮ ಚರ್ಚೆಯ ಯೋಜನೆ

- ಉತ್ತಮ ಚರ್ಚೆಗೆ ಈ ಅಂಶಗಳು ಅವಶ್ಯಕ.
- ಮುಖಂಡನು ಮಕ್ಕಳಿಗೆ ಕಲಿಕೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಸಲಹೆ, ಮಾರ್ಗದರ್ಶನ, ಸಹಕಾರ ನೀಡಿ, ಮೇಲ್ವಿಚಾರಣೆ ನಿಯಂತ್ರಣ ಮಾಡುವವನಾಗಬೇಕು.
- ಸಮೂಹ ಎಂದರೆ ವಿದ್ಯಾರ್ಥಿಗಳ ಗುಂಪು. ಪ್ರತಿಯೊಬ್ಬ ವಿದ್ಯಾರ್ಥಿಯೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು.
- ಚರ್ಚೆಗೆ ತೆಗೆದುಕೊಳ್ಳುವ ವಿಷಯ, ತರಗತಿಯ ಪಾಠ ಒಳಗೊಂಡಂತೆ ಸ್ಪಷ್ಟ, ನಿಖರ ಹಾಗೂ ಸೂಕ್ತ/ ಯೋಗ್ಯವಾಗಿರಬೇಕು.
- ಚರ್ಚಾ ಪದ್ಧತಿಯಲ್ಲಿ ವಿಷಯವಸ್ತುವೇ ಪ್ರಮುಖ ಅಂಶವಾಗಿದೆ. ಚರ್ಚೆಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ವಿದ್ಯಾರ್ಥಿಗೂ ವಿಷಯವಸ್ತುವಿನ ಪರಿಪೂರ್ಣ ಜ್ಞಾನವಿರಬೇಕಾದುದು ಅಗತ್ಯವಾಗಿದೆ.

**ಚರ್ಚಾ ಪದ್ಧತಿಯ ಪ್ರಕಾರಗಳು:** ಅನೌಪಚಾರಿಕ ಗುಂಪು ಯೋಜನೆ (ದುಂಡು ಮೇಜಿನ ಪರಿಷತ್ತು), ಚರ್ಚಾಗೋಷ್ಠಿ, ವಿಚಾರ ಸಂಕಿರಣ, ಪ್ರಾತ್ಯಕ್ಷಿಕೆ.

### ಚರ್ಚಾ ಪದ್ಧತಿಯ ಗುಣಗಳು

- ಇಲ್ಲಿ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವುದರಿಂದ ಮಕ್ಕಳು ಅಭಿಪ್ರಾಯ ವ್ಯಕ್ತಗೊಳಿಸುವ ಸಾಮರ್ಥ್ಯ ಪಡೆಯುತ್ತಾರೆ.
- ಇದರಿಂದ ಮಕ್ಕಳಲ್ಲಿ ವಿಮರ್ಶಾತ್ಮಕ ದೃಷ್ಟಿಕೋನ ಬೆಳೆಯುವುದರಿಂದ ಇತರರ ಅಭಿಪ್ರಾಯಗಳನ್ನು ತಾಳ್ಮೆಯಿಂದ ಕೇಳುವ ಪ್ರವೃತ್ತಿ ಬೆಳೆಸಿಕೊಳ್ಳುತ್ತಾರೆ.

Scanned with CamScanner

- ವಿದ್ಯಾರ್ಥಿಗಳು ಆತ್ಮವಿಶ್ವಾಸ ಬೆಳೆಸಿಕೊಳ್ಳುವುದರಿಂದ ಮಕ್ಕಳಲ್ಲಿ ಅನಿರೀಕ್ಷಿತವಾಗಿರುವ ಅನೇಕ ಕೌಶಲ್ಯಗಳೂ (ನಿರ್ಧಾರ ಕೈಗೊಳ್ಳುವಿಕೆ, ಸ್ವತಂತ್ರವಾಗಿ ಆಲೋಚಿಸುವ) ಬೆಳೆಯುತ್ತವೆ.

### ಅವಗುಣಗಳು

- ಈ ಪದ್ಧತಿಯನ್ನು ಎಲ್ಲಾ ತರಹದ ಪಾಠಗಳ ಬೋಧನೆಗೆ ಒಳಪಡಿಸಲು ಸಾಧ್ಯವಿಲ್ಲ.
- ಸಭಾಕಂಪನದಂತಹ ಪ್ರವೃತ್ತಿಯಿರುವ ವಿದ್ಯಾರ್ಥಿಗಳು ಈ ಪದ್ಧತಿಯಲ್ಲಿ ಭಾಗವಹಿಸದೇ ಇರುವುದರಿಂದ ಇದು ಕೇವಲ ವೇದಿಕೆಯಲ್ಲಿ ಮಾತನಾಡುವ ಕೌಶಲ್ಯವುಳ್ಳ ಪ್ರತಿಭಾವಂತ ವಿದ್ಯಾರ್ಥಿಗಳ ಸ್ವತ್ತಾಗುತ್ತದೆ.
- ಶಿಕ್ಷಕ ಮುಖಂಡನಾಗಿರದಿದ್ದರೆ ಈ ಪದ್ಧತಿ ವಿಫಲವಾಗುತ್ತದೆ.

## ಭಾಷಾ ಬೋಧನಾ ಪದ್ಧತಿಗಳು

### ಭಾಷಾ ಬೋಧನೆಯಲ್ಲಿ ಅಳವಡಿಸಿಕೊಳ್ಳಬಹುದಾದ ಚಟುವಟಿಕೆಗಳು

- ನಾಟಕ
- ಚರ್ಚೆ
- ಸಂಭಾಷಣೆ
- ಪ್ರಹಸನ
- ಭಾಷಣ
- ಪದಬಂಧ
- ಮೂಕಾಭಿನಯ
- ಸಂವಾದ
- ಸಂದರ್ಶನ
- ಅಣುಕು
- ಗಾದೆ/ಒಗಟು
- ರೂಪಕ
- ಚಿತ್ರ ಕಥೆ
- ಕಥೆ
- ಭಾಷಾ ಆಟಗಳು
- ಪಾತ್ರಾಭಿನಯ
- ಏಕ ಪಾತ್ರಾಭಿನಯ

### ಬೋಧನೆ-ಕಲಿಕೆಯ ಸಾಮಗ್ರಿಗಳು

- ಮಿಂಚು ಪಟ್ಟಿಗಳು
- ನಿಘಂಟುಗಳು
- ಜಾರು ಪಟ್ಟಿಗಳು
- ಅರ್ಥಕೋಶ
- ಪದಗಳ-ಕಾರ್ಡುಗಳು
- ವಿಶ್ವಕೋಶ
- ಮಾದರಿಗಳು
- ಧ್ವನಿ ಸುರುಳಿಗಳು
- ಚಿತ್ರಪಟಗಳು
- ರೇಡಿಯೋ
- ದೂರದರ್ಶನ
- ಚಿತ್ರಕತೆಗಳು
- ಚಲನಚಿತ್ರ-ಸಾಕ್ಷ್ಯಚಿತ್ರ
- ಸ್ಲೈಡ್ಸ್
- ಡಾಮಿನೋ ಕಾರ್ಡುಗಳು
- ಭಿತ್ತಿ ಪತ್ರಗಳು, ಕರ ಪತ್ರಗಳು
- ಹಾಡು, ಕಥೆ, ನಾಟಕ, ಪ್ರಹಸನಗಳ ಸಂಗ್ರಹ
- ವಾರಪತ್ರಿಕೆ, ದಿನಪತ್ರಿಕೆ, ಮಕ್ಕಳ ನಿಯತಕಾಲಿಕೆಗಳು

### ಚಟುವಟಿಕೆ ಎಂದರೇನು? ಹೇಗಿರಬೇಕು?

ಕಲಿಕೆಯ ದೃಷ್ಟಿಯಿಂದ ಮಗು ಏನೆಲ್ಲಾ ಮಾಡುತ್ತದೋ ಅದೆಲ್ಲವನ್ನು ಚಟುವಟಿಕೆ ಎನ್ನುವರು. ಮಗು ದೈಹಿಕವಾಗಿ ಮತ್ತು ಮಾನಸಿಕವಾಗಿ ಭಾಗವಹಿಸುವ ಎಲ್ಲಾ ಸನ್ನಿವೇಶಗಳನ್ನು ಚಟುವಟಿಕೆ ಎನ್ನುತ್ತೇವೆ. ಕೇವಲ ಹಾಡು, ಅಭಿನಯ ಗೀತೆ, ಆಟಗಳು ಮಾತ್ರ ಚಟುವಟಿಕೆಗಳಲ್ಲ. ಕಲಿಕೆಯ ಪ್ರಕ್ರಿಯೆಗೆ ತರಗತಿವಾರು ನಿಗದಿತ ಸಾಮರ್ಥ್ಯಗಳಿವೆ. ಈ ಸಾಮರ್ಥ್ಯಗಳನ್ನು ಪ್ರಭುತ್ವ ಮಟ್ಟದಲ್ಲಿ ಬೆಳೆಸಲು ಚಟುವಟಿಕೆಗಳು ಮತ್ತು ಬೋಧನೆ-ಕಲಿಕೆಯ ಸಾಮಗ್ರಿಗಳು ಬಹಳ ಮುಖ್ಯ.

ಸಾಮರ್ಥ್ಯ ಅಥವಾ ಪರಿಕಲ್ಪನೆಯನ್ನು ಪ್ರಭುತ್ವಮಟ್ಟದಲ್ಲಿ ಬೆಳೆಸಬೇಕಾದರೆ 6 ಹಂತದ ಚಟುವಟಿಕೆಗಳನ್ನು ನಿರ್ವಹಿಸಬೇಕಾಗುತ್ತದೆ. ಕೆಲವು ಸಾಮರ್ಥ್ಯಗಳು 1ನೇ ತರಗತಿಯಿಂದ 7ನೇ ತರಗತಿಯವರೆಗೆ ಶ್ರೇಣೀಕೃತವಾಗಿ, ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುತ್ತವೆ. ಕೆಲವು ಸಾಮರ್ಥ್ಯಗಳು ಹೊಸದಾಗಿ ಬಂದು ಸೇರಿಕೊಳ್ಳುತ್ತದೆ. ಸಾಮರ್ಥ್ಯಗಳನ್ನು ಹೊಸದಾಗಿ ಕಲಿಸುವಾಗ 6 ಹಂತದ ಚಟುವಟಿಕೆಗಳು ಬೇಕಾಗುತ್ತವೆ.

### ಚಟುವಟಿಕೆಯ ಹಂತಗಳು

1. ಪೂರ್ವಸಿದ್ಧತೆಯ ಹಂತ
2. ಕಲಿಕೆಗೆ ಪೂರಕ ಹಂತ
3. ಕಲಿಕೆಯ ಹಂತ
4. ಅಭ್ಯಾಸ ಹಂತ
5. ಬಳಕೆಯ (ಅನ್ವಯ) ಹಂತ
6. ಮೌಲ್ಯಮಾಪನ ಹಂತ

## ಗದ್ಯ ಮತ್ತು ಪದ್ಯ ಬೋಧನಾ ವಿಧಾನಗಳು

### ಮಹತ್ವ

ಸಾಹಿತ್ಯವನ್ನು ಸಾಮಾನ್ಯವಾಗಿ ಗದ್ಯ ಮತ್ತು ಪದ್ಯ ಎಂಬುದಾಗಿ ವಿಂಗಡಿಸುತ್ತಾರೆ. ಪದ್ಯಸಾಹಿತ್ಯ ಎಲ್ಲರಿಗೂ ಮೆಚ್ಚುಗೆಯಾಗಿತ್ತು. ಮುದ್ದಣ ಕವಿಯಂತೂ "ಪದ್ಯಂ ವದ್ಯಂ ಗದ್ಯಂ ಹೃದ್ಯಂ" ಎಂದಿದ್ದಾನೆ. ಗದ್ಯ ಸಾಹಿತ್ಯವು ಇಂದು ವಿಪುಲವಾಗಿ ಬೆಳೆದಿದೆ. ಪ್ರಬಂಧ, ಸಣ್ಣ ಕತೆ, ಹರಟೆ, ವಿಚಾರ ಸಾಹಿತ್ಯ ಮುಂತಾದವು.

ಗದ್ಯವು ಭಾಷೆಯ ಬೆಳವಣಿಗೆಗೆ ಉತ್ತಮ ಮಾಧ್ಯಮವಾಗಿದೆ. ವಿಚಾರ ಪ್ರಧಾನವಾಗಿದ್ದು, ಆಲೋಚನಾ ಶಕ್ತಿಯನ್ನು ಬೆಳೆಸುತ್ತದೆ.

- **ಭಾಷಾ ಕೌಶಲಗಳನ್ನು ಬೆಳೆಸುವಾಗ ಸಾಮರ್ಥ್ಯಗಳಿಗೆ ಅನುಗುಣವಾಗಿ ಗದ್ಯ ಬೋಧನೆ ಮತ್ತು ಪದ್ಯ ಬೋಧನೆಯಲ್ಲಿ ಕೆಳಗಿನ ಅಂಶಗಳನ್ನು ಗಮನಿಸಿರಿ:**
- **ಗದ್ಯ ಬೋಧನೆ ಮಾಡುವಾಗ ಗಮನಿಸಬೇಕಾದುದೇನು?**

ಛಂದೋ ನಿಯಮಗಳಿಗೆ ಒಳಪಡದೆ, ಶಿಷ್ಟ ಭಾಷೆಯಲ್ಲಿ ವ್ಯಾಕರಣ ಮತ್ತು ಅರ್ಥಬದ್ಧವಾಗಿ, ತರ್ಕಬದ್ಧ ವಾಕ್ಯ ಸರಣಿಗಳ ಮೂಲಕ ಸುಸಂಬದ್ಧವಾಗಿ ರಚಿಸಲ್ಪಟ್ಟಿರುತ್ತದೆ.

ಗದ್ಯ ಬೋಧನೆಯ ಸಾಮಾನ್ಯ ಗುರಿ ಭಾಷಾ ಕೌಶಲಗಳ ರಚನೆ ಮತ್ತು ಪ್ರಯೋಗದಲ್ಲಿ ಸಾಮರ್ಥ್ಯ ಬೆಳೆಸುವುದು. ವಿಷಯ ಜ್ಞಾನ, ಓದುಗಾರಿಕೆಯ ಹವ್ಯಾಸ ಹಾಗೂ ಸಾಹಿತ್ಯ ಅಧ್ಯಯನ ಮತ್ತು ಅಭಿರುಚಿಯನ್ನು ಬೆಳೆಸುವುದು. ಆಲಿಸಿ ಅರ್ಥ ಗ್ರಹಿಸುವುದು. ಮಾತು, ಓದು, ಬರಹ ಹಾಗೂ ಸ್ವತಂತ್ರವಾದ ಯೋಜನೆಯನ್ನು ಬೆಳೆಸುವುದು ಮುಖ್ಯ ಉದ್ದೇಶ.

- **ಪದ್ಯ ಬೋಧನೆ ಮಾಡುವಾಗ ಗಮನಿಸಬೇಕಾದುದೇನು?**

ಕವಿಯೊಬ್ಬನ ಕನಸು, ಕಲ್ಪನೆ ಅನಿಸಿಕೆ, ಭಾವನೆ, ಅನುಭವಗಳನ್ನು ಭಾಷೆಯಲ್ಲಿ ಸುಸಂಬದ್ಧವಾಗಿ ಮತ್ತು ಛಂದೋಬದ್ಧವಾಗಿ ಅಭಿವ್ಯಕ್ತಿಗೊಳಿಸುವುದೇ ಪದ್ಯ.

### ಪದ್ಯ ಬೋಧನೆಯ ಪ್ರಾಮುಖ್ಯತೆಗಳು



- ಭಾವನಾತ್ಮಕ ವಿಕಾಸಕ್ಕೆ
- ಆನಂದವನ್ನು ಪಡೆಯಲು
- ಕಾವ್ಯದ ರಸಸ್ವಾದನೆಗಾಗಿ
- ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳಲು
- ಸೃಜನಶೀಲ ಅಭಿವ್ಯಕ್ತಿ ಸಾಮರ್ಥ್ಯಗಳಿಸುವುದಕ್ಕೆ
- ಗಾಯನ ಕಲೆಯಲ್ಲಿ ಸಾಮರ್ಥ್ಯ ಗಳಿಸಿಕೊಳ್ಳಲು
- ಛಂದಸ್ಸು ಮತ್ತು ಅಲಂಕಾರಗಳನ್ನು ತಿಳಿದುಕೊಳ್ಳಲು
- ನಾಡು, ನುಡಿಗಳ ಬಗ್ಗೆ ಅಭಿಮಾನ ಮತ್ತು ಗೌರವ ಬೆಳೆಸಲು

### ಕಲಿಕೆಯ ಹಂತದ ಗದ್ಯ ಬೋಧನೆಯ (ಹಂತಗಳು)/ವಿಧಾನ

ಭಾಷಾ ಬೋಧನೆಯಲ್ಲಿ 4 ಕೌಶಲಗಳು ಜೊತೆ ಜೊತೆಯಾಗಿಯೇ ಸಾಗುತ್ತವೆ. ಆದರೆ ಆ ಪಾಠದಲ್ಲಿ ನಿರ್ದಿಷ್ಟವಾಗಿ ಬೆಳೆಸಬೇಕಾದ ಸಾಮರ್ಥ್ಯಕ್ಕೆ ಹೆಚ್ಚು ಒತ್ತು ಕೊಡಬೇಕು.

### ವಿಧಾನಗಳು

- ಪಾಠದಲ್ಲಿ ಬಂದಿರುವ ಹೊಸಪದಗಳು, ಸಮಾನಾರ್ಥಕ ಪದಗಳು, ವಿರುದ್ಧಾರ್ಥಕ ಪದಗಳು, ಪದಪುಂಜ, ಗಾದೆ ಇತ್ಯಾದಿ ಅಂಶಗಳನ್ನು ಕಪ್ಪುಹಲಗೆಯ ಮೇಲೆ ಬರೆದು ಅರ್ಥೈಸಬೇಕು.
- ಇಡೀ ಪಾಠ ಬೋಧನೆಯಾದ ನಂತರ ಆಯಾಯ ಪಾಠಕ್ಕೆ ಸಂಬಂಧಿಸಿದ ಭಾಷಾಭ್ಯಾಸದಲ್ಲಿ ನೀಡಿರುವ ವ್ಯಾಕರಣಾಂಶಗಳನ್ನು ಕಲಿಸಬೇಕು.
- ಅಭ್ಯಾಸ ಹಂತದ ಚಟುವಟಿಕೆಗಳಾಗಿ ಪ್ರತಿ ಪಾಠದ ಅಭ್ಯಾಸ, ಭಾಷಾ ಚಟುವಟಿಕೆಯನ್ನು ಮಾಡಿಸುವುದು.

Scanned with CamScanner

## ಗದ್ಯ ಮತ್ತು ಪದ್ಯಗಳ ನಡುವಿನ ವ್ಯತ್ಯಾಸಗಳು

| ಗದ್ಯ | ಪದ್ಯ |
|---|---|
| 1. ಒಂದು ವಿಷಯದ ಬಗೆಗಿನ ತರ್ಕಬದ್ಧ, ಅರ್ಥಬದ್ಧದ ರಚನೆ. | 1. ಒಂದು ಭಾವನೆಯ ಬಗೆಗಿನ ಕಲಾತ್ಮಕ ಸೃಜನಶೀಲ ಅಭಿವ್ಯಕ್ತಿ. |
| 2. ವಿಷಯ ಪ್ರಧಾನ, ಬುದ್ಧಿಗೆ ಸಂಬಂಧಿಸಿರುತ್ತದೆ. | 2. ಭಾವ ಹಾಗೂ ರಸ ಪ್ರಧಾನ, ಹೃದಯಕ್ಕೆ ಸಂಬಂಧಿಸಿರುತ್ತದೆ. |
| 3. ಛಂದೋನಿಯಮಗಳಿಗೊಳಪಡದ ಸುಸಂಬದ್ಧ ರಚನೆ. | 3. ಛಂದೋ ನಿಯಮಗಳಿಗೊಳಪಟ್ಟ ಕಲಾತ್ಮಕ ರಚನೆ. |
| 4. ಲೇಖಕರ ಆಲೋಚನೆಗಳು ವ್ಯಕ್ತವಾಗಿರುತ್ತವೆ. | 4. ಕವಿಯ ಕಲ್ಪನೆಗಳು ವ್ಯಕ್ತವಾಗಿರುತ್ತದೆ. |
| 5. ಮಾಹಿತಿ ಮತ್ತು ವಿವರಗಳಿಂದ ಕೂಡಿರುತ್ತದೆ. | 5. ಕಲ್ಪನೆಗಳು, ಸೌಂದರ್ಯ ಮತ್ತು ವರ್ಣನೆಗಳಿಂದ ಕೂಡಿರುತ್ತವೆ. |
| 6. ವಿವರಣಾತ್ಮಕ ಅಭಿವ್ಯಕ್ತಿ ಮೂರ್ತ ಸ್ವರೂಪದ ರಚನೆ | 6. ಸಂಕ್ಷಿಪ್ತ, ಅಂತರ್ಗತಗೊಂಡ ಕಲಾತ್ಮಕ ಅಭಿವ್ಯಕ್ತಿ ಅಮೂರ್ತವಾಗಿರುತ್ತದೆ. |
| 7. ಓದಿಕೊಳ್ಳುವಂತಹ ಕ್ರಮದಲ್ಲಿ ರಚನೆಯಾಗಿರುತ್ತದೆ. | 7. (ಗೇಯ) ಸ್ವರೂಪದಲ್ಲಿ ರಚನೆಯಾಗಿರುತ್ತವೆ. |
| 8. ಲೋಕ ವಿಚಾರಗಳು ಇರುತ್ತವೆ. | 8. ಕಾವ್ಯ ಸತ್ಯಗಳು ಇರುತ್ತವೆ. |



### ವ್ಯಾಕರಣ ಬೋಧನಾ ವಿಧಾನ

- ಕಪ್ಪುಹಲಗೆಯ ಮೇಲೆ ಹಲವಾರು ಉದಾಹರಣೆಗಳನ್ನು ಕೊಡಬೇಕು.
- ಕಪ್ಪುಹಲಗೆಯಲ್ಲಿ ಬರೆದ ಉದಾಹರಣೆ ವಾಕ್ಯಗಳನ್ನು ಮಕ್ಕಳಿಂದ ಓದಿಸಿ ಅವಶ್ಯವೆನಿಸಿದೆಡೆ ಅವುಗಳ ಅರ್ಥಗ್ರಹಣ ಮಕ್ಕಳಿಗೆ ಮಾಡಿಕೊಡಬೇಕು.
- ಉದಾಹರಣೆ ವಾಕ್ಯಗಳ ಹೋಲಿಕೆ ಮತ್ತು ವ್ಯತ್ಯಾಸ ತಿಳಿಸುವುದು.
- ಅವುಗಳಲ್ಲಿ ಅಡಕವಾದ ನಿಯಮವನ್ನು ಮಕ್ಕಳು ಕಂಡುಹಿಡಿದು ತಮ್ಮ ಶಬ್ದಗಳಲ್ಲಿ ಹೇಳಿಸುವುದು.
- ಮಕ್ಕಳು ಹೇಳಿದ ನಿಯಮವನ್ನು ಶಿಷ್ಟ ಭಾಷೆಯಲ್ಲಿ ಶಿಕ್ಷಕರು ವ್ಯಾಖ್ಯಾನಿಸುವುದು. ಕಂಡುಹಿಡಿದ ನಿಯಮದ ಅಥವಾ ಸೂತ್ರದ ಬಳಕೆ ಮಾಡಿಸುವುದು.

### ಬೋಧನೆಯ ಗುರಿಗಳು

- ಪದ ಮತ್ತು ವಾಕ್ಯ ರಚನಾ ಕೌಶಲ ಬೆಳೆಸುವುದು.
- ಪದ ಮತ್ತು ಕಾವ್ಯಗಳ ಅಧ್ಯಯನ ಸಾಮರ್ಥ್ಯ ಬೆಳೆಸುವುದು.
- ಉತ್ತಮ ಶೈಲಿಯನ್ನು ಪರಿಚಯಿಸಿ ಕಲಿಸುವುದು.
- ಭಾಷೆಯ ಬಗ್ಗೆ ತಾರ್ಕಿಕ ಜ್ಞಾನ ಬೆಳೆಸುವುದು.
- ಭಾಷಾ ಪ್ರಭುತ್ವವನ್ನು ಬೆಳೆಸುವುದು.
- ವಾಕ್ಯರಚನೆ ತಪ್ಪುಗಳನ್ನು ಗುರುತಿಸಿ ತಿದ್ದುವುದು.
- ಅಕ್ಷರ ಜೋಡಣೆಯನ್ನು ಬಲಗೊಳಿಸುವುದು.
- ಪರಿಣಾಮಕಾರಿ ಅಭಿವ್ಯಕ್ತಿ ಕೌಶಲಗಳನ್ನು ಬೆಳೆಸುವುದು.

- **ಪಠ್ಯ ಪುಸ್ತಕ ಬೋಧನೆ:** ಕನ್ನಡ ವಿಷಯವನ್ನು ಪಠ್ಯಪುಸ್ತಕದ ಸಹಾಯದಿಂದ ಬೋಧಿಸುವಂತಹ ಪದ್ಧತಿ. ಇದು ಸಾಂಪ್ರದಾಯಿಕ ಭಾಷಾ ಬೋಧಕರಿಗೆ ಭಾಷಾ ಪುಸ್ತಕವೇ ಕೈಪಿಡಿ ಮತ್ತು ಜೀವಾಳ. ಪಠ್ಯಪುಸ್ತಕದಲ್ಲಿ ವಿಷಯ ವಸ್ತುವನ್ನು ತಾರ್ಕಿಕವಾಗಿಯೂ ಮತ್ತು ವ್ಯವಸ್ಥಿತವಾಗಿಯೂ ಅಳವಡಿಸಲಾಗಿರುತ್ತದೆ.

### ಪಠ್ಯಪುಸ್ತಕದಿಂದಾಗುವ ಅನುಕೂಲಗಳು

- ಪಠ್ಯಪುಸ್ತಕ ವಿಷಯವನ್ನು ನಿಖರವಾಗಿ ಒದಗಿಸುತ್ತದೆ.
- ಅಧ್ಯಯನ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗಿದೆ.
- ಸ್ವಯಂ ಅಧ್ಯಯನವನ್ನು ಪ್ರೋತ್ಸಾಹಿಸುತ್ತದೆ.
- ಪಠ್ಯಪುಸ್ತಕ ಉಳಿದೆಲ್ಲ ಬೋಧನಾ ಪದ್ಧತಿಗಳಿಗೆ ಆಧಾರವಾಗಿದೆ.
- ಶಿಕ್ಷಕ ಮತ್ತು ವಿದ್ಯಾರ್ಥಿಗಳು ಪಠ್ಯಪುಸ್ತಕದ ಮೇಲೆ ಹೆಚ್ಚು ಅವಲಂಬಿತರಾಗಿರುತ್ತಾರೆ.
- ಪಠ್ಯಪುಸ್ತಕ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಈಡೇರಿಸುತ್ತದೆ.

### ಪಠ್ಯಪುಸ್ತಕದಿಂದಾಗುವ ಅನಾನುಕೂಲಗಳು

- ಪಠ್ಯಪುಸ್ತಕದಲ್ಲಿರುವ ಎಲ್ಲ ವಿಷಯಗಳನ್ನು ವಿದ್ಯಾರ್ಥಿಗಳು ಅಂಧಾನುಕರಣೆಯಿಂದ ಕಂಠಪಾಠ ಮಾಡುತ್ತಾರೆ.
- ಕೇವಲ ಕನಿಷ್ಠ ಅವಶ್ಯಕತೆಗಳನ್ನು ಮಾತ್ರ ಒಳಗೊಂಡಿರುತ್ತದೆ.
- ಕೇವಲ ಪಠ್ಯಪುಸ್ತಕದಲ್ಲಿರುವ ವಿಷಯವನ್ನಷ್ಟೇ ಕಲಿಯುವುದರಿಂದ ವಿದ್ಯಾರ್ಥಿಗಳ ಕಲ್ಪನಾಶಕ್ತಿಯನ್ನು ಬೆಳೆಸುವಲ್ಲಿ ವಿಫಲವಾಗುತ್ತದೆ.
- ಈ ಪದ್ಧತಿಯು ಅವೈಜ್ಞಾನಿಕವಾಗಿದ್ದು, ವಿದ್ಯಾರ್ಥಿಗಳ ಮಾನಸಿಕ ಮತ್ತು ಬೌದ್ಧಿಕ ಮಟ್ಟವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

### ಉಪ ಪಠ್ಯಪುಸ್ತಕದಿಂದಾಗುವ ಪ್ರಯೋಜನಗಳು

- ಪಠ್ಯಪುಸ್ತಕದಿಂದ ಗಳಿಸಿದ ಅನುಭವವನ್ನು ಉಪಪಠ್ಯಪುಸ್ತಕದ ಅಧ್ಯಯನದಿಂದ ಒರೆ ಹಚ್ಚಲು ಸಹಾಯಕವಾಗುತ್ತದೆ.
- ವಿಷಯ ಸಂಗ್ರಹ ಹಾಗೂ ಜ್ಞಾನಾಭಿವೃದ್ಧಿಗೆ ಉತ್ತಮವಾದ ಮಾಧ್ಯಮ.
- ಸ್ವತಂತ್ರವಾದ ಓದುಗಾರಿಕೆಯ ಅಭ್ಯಾಸ ಉಂಟಾಗುತ್ತದೆ.
- ಕಲ್ಪನಾಶಕ್ತಿ, ಸೃಜನಾತ್ಮಕತೆ ಹಾಗೂ ಸೌಂದರ್ಯ ಪ್ರಜ್ಞೆ ಬೆಳೆಸುತ್ತದೆ.
- ಶೀಘ್ರ ವಾಚನಕ್ಕೆ ಅವಕಾಶವಿದ್ದು ವ್ಯಾಕರಣಾಂಶವಿರುವುದಿಲ್ಲ.
- **ಪತ್ರ ಲೇಖನ:** ವ್ಯವಹಾರಿಕ ಪತ್ರಗಳು, ಖಾಸಗಿ ಪತ್ರಗಳು ಮತ್ತು ವೃತ್ತಪತ್ರಿಕೆಗಳಿಗೆ ಬರೆಯುವ ಪತ್ರಗಳು ಎಂದು ವಿಂಗಡಿಸಲಾಗುವುದು.
- **ಖಾಸಗಿ ಪತ್ರ:** ಹಿರಿಯರು, ಕಿರಿಯರು ಹಾಗೂ ಸಮಾನರಿಗೆ ಬರೆಯುವ ಪತ್ರಗಳಲ್ಲಿ ಖಾಸಗಿ ಪತ್ರದ ಸಂಬೋಧನೆ ಮುಕ್ತಾಯ ಮುಂತಾದ ಅಂಶಗಳಲ್ಲಿ ಬದಲಾಗುತ್ತದೆ.
- **ವ್ಯಾವಹಾರಿಕ ಪತ್ರ:** ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳೊಂದಿಗೆ ವ್ಯವಹರಿಸಲು ಬರೆಯುವ ಪತ್ರಗಳನ್ನು ವ್ಯಾವಹಾರಿಕ ಪತ್ರಗಳೆನ್ನಬಹುದು.
- **ವೃತ್ತ ಪತ್ರಿಕೆಗಳಿಗೆ ಬರೆಯುವ ಪತ್ರ:** ಪತ್ರಿಕೆಗಳ ಸಂಪಾದಕರನ್ನು ಸಂಬೋಧಿಸಬೇಕು ಹಾಗೂ ಬರವಣಿಗೆಯ ಶೈಲಿಯಲ್ಲಿ ಓದುಗರನ್ನು ಆಕರ್ಷಿಸುವಂತೆ ಪತ್ರಗಳನ್ನು ಬರೆಯಲಾಗುತ್ತದೆ.

### ಪತ್ರ ಲೇಖನ ಒಳಗೊಂಡಿರಬೇಕಾದ ಅಂಶಗಳು

- **ಮಾನ್ಯರೆ.** : ಇದನ್ನು ಗೌರವ ಸಂಬೋಧನೆ ಎನ್ನುತ್ತೇವೆ.
- **ವಿಷಯ:** ಪತ್ರದ ಉದ್ದೇಶವನ್ನು ಒಂದೆರಡು ಸಾಲುಗಳಲ್ಲಿ ಮಾತ್ರ ಬರೆಯುವುದು.
- **ಒಡಲು:** ವಿಷಯವನ್ನು ಸಾಧ್ಯವಷ್ಟು ಸರಳ ರೀತಿಯಲ್ಲಿ ಹಾಗೂ ಸ್ಪಷ್ಟವಾಗಿ ವಿವರಿಸಬೇಕು.
- **ತಮ್ಮ ವಿಶ್ವಾಸಿ:** ವಿವರಣೆಯ ನಂತರ ಅಭಿನಂದನೆಯೊಂದಿಗೆ ಪತ್ರವನ್ನು ಮುಗಿಸುವುದು.
- **ಸಹಿ:** ಕೊನೆಯಲ್ಲಿ ಸಹಿಯನ್ನು ಮಾಡುವುದರಿಂದ ಪತ್ರಕ್ಕೆ ಬೆಲೆ ಇರುತ್ತದೆ.



Scanned with CamScanner

## ಮೌಲ್ಯ ಶಿಕ್ಷಣ (Value Education)

ಶಿಕ್ಷಣ ಪದ್ಧತಿಯಲ್ಲಿ ಮೌಲ್ಯಗಳನ್ನು ಅಳವಡಿಸುವುದೇ ಮೌಲ್ಯ ಶಿಕ್ಷಣವಾಗಿದೆ.

### ಸ್ವರೂಪ

ಮೌಲ್ಯ ಶಿಕ್ಷಣ ಸಹ ಪಠ್ಯ ಚಟುವಟಿಕೆಗಳಲ್ಲಿ ಅಳವಡಿಸಬೇಕಾದ ಮುಖ್ಯ ವಿಷಯ. ಆರೋಗ್ಯಕರ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಮಾಡಬೇಕಾದ ಪ್ರಮುಖ ಕೆಲಸವೆಂದರೆ ಇಂದಿನ ಯುವ ಪೀಳಿಗೆಗೆ ಲೈಂಗಿಕ ಶಿಕ್ಷಣ, ನೈತಿಕ ಹಾಗೂ ಮೌಲ್ಯಯುತ ಶಿಕ್ಷಣ ಸುವ್ಯವಸ್ಥಿತವಾಗಿ ಅವರ ಬದುಕು ಸಾಗುವಂತೆ ಮಾಡುವುದು.

### ಮೌಲ್ಯ ಶಿಕ್ಷಣದ ಬೆಳವಣಿಗೆ

- ಶಿಕ್ಷಣ ವ್ಯವಸ್ಥೆಯಲ್ಲಿ ಮೌಲ್ಯ ಶಿಕ್ಷಣವನ್ನು ವ್ಯವಸ್ಥಿತವಾಗಿ ಜಾರಿಗೆ ತಂದು ಬೆಳೆಸುವಲ್ಲಿ ಶಿಕ್ಷಕ, ತಂದೆ, ತಾಯಿ/ ಪಾಲಕರು ಹಾಗೂ ಸಮಾಜದ ಪಾತ್ರ ಮಹತ್ವದ್ದಾಗಿದೆ.
- ಶಿಕ್ಷಕ ಕೇವಲ ಪಠ್ಯದಲ್ಲಿರುವುದನ್ನು ಮೌಖಿಕವಾಗಿ ಬೋಧನೆ ಮಾಡದೇ ಮೌಲ್ಯ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಂತಹ ವಿವಿಧ ಚಿತ್ರಗಳನ್ನು ತೋರಿಸುವ ಮೂಲಕ, ಆದರ್ಶ ವ್ಯಕ್ತಿಗಳ ಜೀವನ ಮತ್ತು ಸಾಧನೆಗಳನ್ನು ಅಭಿನಯದ ಮೂಲಕ ಬಿಂಬಿಸಬೇಕು.
- ಶಾಲೆಯಲ್ಲಿ ಶಿಕ್ಷಕನೇ ನಾಯಕ. ಕಾರಣ ತಾನು ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕು.
- ದುಶ್ಚಟಗಳ ದಾಸನಾಗದೇ ಆದರ್ಶಗಳ ಖಣಿಯಾಗಬೇಕು.
- ನಾಡಿನ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ, ರಾಜ ಮಹಾರಾಜರು, ವ್ಯಕ್ತಿಗಳು, ಅವರು ನಿರ್ಮಿಸಿದ ಸ್ಮಾರಕಗಳನ್ನು ತೋರಿಸಿ ಅವುಗಳ ಇತಿಹಾಸ ತಿಳಿಸುವ ಮೂಲಕ ಅವರ ಆದರ್ಶ, ಅವುಗಳ ಮಹತ್ವವನ್ನು ಅರಿಕೆ ಮಾಡಿಕೊಡಬೇಕು.
- ಸಮಾಜ ಕೂಡ ಮಗುವಿಗೆ ಮೌಲ್ಯ ಶಿಕ್ಷಣ ನೀಡುವಲ್ಲಿ ಪರೋಕ್ಷವಾಗಿ ಪಾತ್ರ ನಿರ್ವಹಿಸುತ್ತದೆ.
- ಬೆಳವಣಿಗೆ ಹಾದಿಯಲ್ಲಿ ಅಡೆತಡೆಗಳು ಸಹಜ. ನಿತ್ಯದ ಧಾವಂತ ಬದುಕಿನ ದೊಡ್ಡ ದೊಡ್ಡ ಸವಾಲುಗಳು ಎದುರಾಗುತ್ತವೆ. ಅವಘಡಗಳು ಸಂಭವಿಸುತ್ತವೆ. ಇಂಥ ಸವಾಲುಗಳನ್ನು ಸ್ವೀಕರಿಸಿ, ಆರೋಗ್ಯಕರ ರೀತಿಯಲ್ಲಿ ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಮಗುವಿನ ಸಮಾಜ ಒಳ್ಳೆಯ ರೀತಿಯಲ್ಲಿ ಸಹಕಾರ ನೀಡಬೇಕು.

# ಶಿಶು ಶಿಕ್ಷಣ ಪದ್ಧತಿ–ಪರಿಸರ ಅಧ್ಯಯನ (Child Education System-Environmental Studies)

ಮಾನವ ಸಮಾಜ ಜೀವಿ. ಅವನ ಸುತ್ತಲೂ ವಿಭಿನ್ನ ಗಿಡ ಮರ, ಕೀಟ, ಪಶು, ಪಕ್ಷಿಗಳ ಲೋಕವೇ ಇದೆ. ಇಂಥ ಲೋಕದ ಜೊತೆಗೆ ಸಾಗರ, ಸಮುದ್ರ, ನದಿ, ಪರ್ವತಗಳು, ಅರಣ್ಯಗಳು, ಗಾಳಿ ಬೆಳಕು, ಖನಿಜ ಸಂಪನ್ಮೂಲಗಳೂ ಇವೆ. ಇವುಗಳ ಕುರಿತಾದ ಅರಿವು ಪ್ರತಿ ಮಗುವಿಗೂ ಅವಶ್ಯ ಅದೇ ಪರಿಸರ ಅಧ್ಯಯನ.

### ಸಾಮಾಜಿಕ ಪರಿಸರ

ಮಾನವ ಮೂಲತಃ ಸಮಾಜ ಜೀವಿ. ಹುಟ್ಟುವ ಪ್ರತಿಯೊಂದು ಮಗುವಿನಿಂದಲೂ ಉತ್ತಮವಾದ ಆಚಾರ, ವಿಚಾರ, ಸಂಸ್ಕೃತಿ, ಆದರ್ಶ, ನಡೆ–ನುಡಿಗಳನ್ನೇ ಸಮಾಜ ನಿರೀಕ್ಷಿಸುತ್ತದೆ ಮತ್ತು ಸಾಮಾಜೀಕರಣ ಗೊಳ್ಳುವ ಪ್ರತಿ ಮಗುವೂ ಸಮಾಜದ ವಾತಾವರಣದೊಂದಿಗೆ ಉತ್ತಮ ಸಂಬಂಧ ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆಗೊಳಗಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅಡಗಿರುವ ಸುಪ್ತ ಶಕ್ತಿ ಸಾಮರ್ಥ್ಯಗಳ ವಿಕಸನಕ್ಕೆ ಸಮಾಜವೇ ಹಾದಿ ತೋರುತ್ತದೆ. ನಾಗರಿಕತೆ, ಸಂಸ್ಕೃತಿಯನ್ನು ಮಾನವನಿಗೆ ಧಾರೆ ಎರೆಯುತ್ತದೆ. ಹೀಗೆ ಪರಿಸರವು ವಿವಿಧ ಕ್ಷೇತ್ರಗಳಿಗೆ ಚಾಚಿಕೊಂಡಿರುವಂತೆ ಸಮಾಜದ ಒಳಗೂ ತನ್ನ ವ್ಯಾಪ್ತಿಯನ್ನು ಚಾಚಿಕೊಂಡಿದೆ.

### ಪರಿಸರ ಬೋಧನೆಯ ಗುರಿ ಮತ್ತು ಉದ್ದೇಶಗಳು

ಅದರ ಆಳ, ವ್ಯಾಪ್ತಿ ವಿಸ್ತಾರವಾದುದು. ಕಾರಣ ಅದರ ಮಹತ್ವ, ಗುರಿ, ಉದ್ದೇಶಗಳನ್ನು ಮಗುವಿಗೆ ಆರಂಭದ ಹಂತಗಳಲ್ಲೇ ತಿಳಿಸುವುದು ಇಂದು ತೀರಾ ಅವಶ್ಯವಾಗಿದೆ.

- ಪರಿಸರ ಅಧ್ಯಾಯದ ರಚನಾ ವ್ಯವಸ್ಥೆ, ಪರಿಸರಕ್ಕೆ ಸಂಬಂಧಿಸಿದ ಹಲವಾರು ಸವಾಲುಗಳ ಬಗ್ಗೆ ಅರಿವು ಮೂಡಿಸುವುದು
- ಶಾಲೆಯ ವಿದ್ಯಾರ್ಥಿಗಳು–ಸಮಾಜದ ಸದಸ್ಯರಲ್ಲಿ ಪರಿಸರ ಸಂರಕ್ಷಣೆ ಮತ್ತು ಸಸಿ ನೆಡುವಿಕೆ, ಅವುಗಳ ಪಾಲನೆ, ಪೋಷಣೆ, ವನ್ಯಮೃಗಗಳ ಸಂರಕ್ಷಣೆ, ಪರಿಸರ ಮಾಲಿನ್ಯದಂತಹ ಕಾರ್ಯಕ್ರಮಗಳಲ್ಲಿ ಮಕ್ಕಳು ಕ್ರಿಯಾಶೀಲರಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದು.
- ನೈಸರ್ಗಿಕ ಸಂಪನ್ಮೂಲಗಳನ್ನು ಅಪವ್ಯಯವಾಗದಂತೆ ತಡೆಗಟ್ಟುವ ಕುರಿತು ಅರಿವು ಮೂಡಿಸುವುದು.
- ಮಾನವ ತನ್ನ ಸ್ವಾರ್ಥಕೋಸ್ಕರ ಬೆಳೆ, ಕಾಡನ್ನು, ವನ್ಯಮೃಗಗಳನ್ನು ನಾಶಪಡಿಸುತ್ತಿದ್ದಾನೆ. ಅದರ ದುಷ್ಪರಿಣಾಮವನ್ನು ತಾನೇ ಅನುಭವಿಸುತ್ತಾನೆ. ಕಾರಣ ಪರಿಸರ ನಾಶದಿಂದಾಗುವ ದುಷ್ಪರಿಣಾಮಗಳನ್ನು ತಿಳಿಸಿ, ಪರಿಸರದ ರಕ್ಷಣೆ, ಜೀವ ಸಂಕುಲದ ಒಳಿತಿಗಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತಿಳಿವಳಿಕೆ ಮೂಡಿಸುವುದು.

### ಪರಿಸರ ಅಧ್ಯಯನ ಪಠ್ಯಕ್ರಮ ಹಾಗೂ ಅದರ ನಿರ್ವಹಣೆ

ಪರಿಸರ ಅಧ್ಯಯನದ ಅವಶ್ಯಕತೆ ಇಂದು ತೀರಾ ಅಗತ್ಯವಾಗಿದೆ. ಕಾರಣ ಅದನ್ನು ಶಾಲಾ ಹಂತದಲ್ಲಿಯೇ ಪಠ್ಯಕ್ರಮದಲ್ಲಿ ಸೇರಿಸಿ ಮಕ್ಕಳಿಗೆ ವಿವಿಧ ವಿಷಯಗಳೊಂದಿಗೆ ಸಮನ್ವಯಗೊಳಿಸಿ ಬೋಧಿಸಿ ಪರಿಸರದ ಕುರಿತು ಅರಿವು ಮೂಡಿಸಬೇಕಾದ ಅನಿವಾರ್ಯತೆ ಇದೆ.

- ಬೋಧಿಸುವ ವಿಷಯಕ್ಕೂ ಹಾಗೂ ಪರಿಸರ ಶಿಕ್ಷಣಕ್ಕೂ ಸೂಕ್ತ ಸಮನ್ವಯ ಏರ್ಪಡಿಸಿ ಬೋಧಿಸಬೇಕು. ಅಂದರೆ ಹೋಲಿಕೆ ಸಹಜವಾಗಿರಬೇಕು.
- ಒಂದು ಬೋಧನಾ ಅವಧಿಯಲ್ಲಿ ಪರಿಸರ ಶಿಕ್ಷಣ ಕುರಿತು ಕೆಲವೇ ಕೆಲವು ಪರಿಕಲ್ಪನೆಗಳನ್ನು ಬೋಧಿಸಬೇಕೇ ಹೊರತು ಎಲ್ಲವನ್ನೂ ಏಕಕಾಲಕ್ಕೆ ಬೋಧಿಸಿದರೆ ಅದು ಶಿಕ್ಷಕರ ಕೇವಲ ಕರ್ತವ್ಯ ನಿರ್ವಹಣೆಯ ಬಾಹ್ಯ/ ವ್ಯಾವಹಾರಿಕ ಪಾತ್ರ ನಿರ್ವಹಣೆ ಮಾಡಿದಂತಾಗುತ್ತದೆಯೇ ಹೊರತು ಮಕ್ಕಳಿಗೆ ಆ ಬೋಧನೆ ಫಲಪ್ರದವಾಗುವುದಿಲ್ಲ.
- ಶಿಕ್ಷಕರು ಆಯಾ ವಿಷಯಗಳ ಪಾಠ ಬೋಧಿಸುವ ಮುನ್ನ ಪಾಠ ಯೋಜನೆ ಸಿದ್ಧಪಡಿಸುವಾಗ ಪರಿಸರ, ಅದರ ಮಾಲಿನ್ಯ, ನಿವಾರಣೋಪಾಯಗಳು, ನಿರ್ವಹಣೆ ಕುರಿತಾದ ವಿಷಯಗಳನ್ನು ಸೇರಿಸಿ ಸಿದ್ಧಪಡಿಸಬೇಕು.
- ಬೇರೆ ಬೇರೆ ವಿಷಯಗಳೊಂದಿಗೆ ಪರಿಸರ ಶಿಕ್ಷಣ ಕೊಡುವುದರಿಂದ ಪದೇ ಪದೇ ಆ ಅಂಶಗಳನ್ನು ಕೇಳುತ್ತಾ ಪರಿಸರಕ್ಕೆ ಸಂಬಂಧಪಟ್ಟ ಅಂಶಗಳು ಮಕ್ಕಳ ಮನಸ್ಸಿನಲ್ಲಿ ಉಳಿಯುತ್ತವೆ.
- ನೇರ ಪದ್ಧತಿ, ಸಮನ್ವಯ ಪದ್ಧತಿ, ಚರ್ಚಾ ಪದ್ಧತಿ ಸೇರಿದಂತೆ ಮುಂತಾದ ಪದ್ಧತಿಗಳ ಮೂಲಕ ಪರಿಸರ ಶಿಕ್ಷಣ ನೀಡುವುದರಿಂದ ಈ ಬೋಧನೆ ಯಶಸ್ವಿಯಾಗುತ್ತದೆ.

Scanned with CamScanner

## ಬೋಧನಾ ಪದ್ಧತಿಗಳು ಹಾಗೂ ಬೋಧನಾ ತಂತ್ರಗಳು

**ನೇರ ಪದ್ಧತಿ:** ತರಬೇತಿ ಪಡೆದ ಅರ್ಹ ಶಿಕ್ಷಕರಿಂದ ಪರಿಸರ ಶಿಕ್ಷಣದ ಪ್ರತಿಯೊಂದು ಪರಿಕಲ್ಪನೆಯನ್ನು ಕ್ರಮಬದ್ಧವಾಗಿ ಹಾಗೂ ಸಮಗ್ರವಾಗಿ ಶಾಲೆಯಲ್ಲಿ ಬೋಧಿಸುವುದಕ್ಕೆ ನೇರ ಪದ್ಧತಿ ಎನ್ನುತ್ತಾರೆ.

**ನೇರ ಪದ್ಧತಿಯ ಗುಣಗಳು**

1) ಇದು ಒಂದು ಸರಳ ರೀತಿಯ ಬೋಧನೆಯಾಗಿದೆ.
2) ಪರಿಸರ ಶಿಕ್ಷಣದ ವಿಷಯದ ಜ್ಞಾನವು ಕ್ರಮಬದ್ಧವಾಗಿ ಸಮಗ್ರವಾಗಿ ದೊರೆಯುವುದು.
3) ಇಲ್ಲಿ ನಿರಂತರ ಬೋಧನೆ ಹಾಗೂ ಕಲಿಕೆ ಸಾಧ್ಯ.
4) ಅವಶ್ಯಕ ದೃಕ್ ಶ್ರವಣೋಪಕರಣಗಳನ್ನು ಬಳಸಿ ಪಾಠ ಮಾಡಲು ಸಾಧ್ಯ.
5) ಎಲ್ಲ ಮಕ್ಕಳು ಆಸಕ್ತಿಯಿಂದ ಕಲಿಯುವರು.

**ಅವಗುಣಗಳು**

1) ಮಕ್ಕಳಿಗೆ ಪಠ್ಯಕ್ರಮದ ಭಾರವನ್ನು ಹೆಚ್ಚಿಸುವುದು
2) ಆರ್ಥಿಕವಾಗಿ ಅಪವ್ಯಯಕಾರಿಯಾದುದು. ಏಕೆಂದರೆ ಈ ತೆರನಾದ ಶಿಕ್ಷಣಕ್ಕೆ ಪ್ರತ್ಯೇಕವಾಗಿ ಶಿಕ್ಷಕರನ್ನು ನೇಮಕ ಮಾಡುವುದರಿಂದ ರಾಜ್ಯದ ಆರ್ಥಿಕ ಹೊರೆ ಹೆಚ್ಚಾಗುವುದು.
3) ವಿಷಯವು ಸಹ ಸಂಬಂಧವಾಗಿರದೇ ಬೋಧನೆಯಲ್ಲಿ ನೀರಸತೆ ಉಂಟಾಗುತ್ತದೆ.

### ಸಮನ್ವಯ ಪದ್ಧತಿ

- ಪರಿಸರ ಶಿಕ್ಷಣದ ಪರಿಕಲ್ಪನೆಯನ್ನು ಶಾಲೆಯ ಇತರ ವಿಷಯಗಳೊಂದಿಗೆ ಸಮನ್ವಯಗೊಳಿಸಿ ಬೋಧಿಸುವುದಕ್ಕೆ ಸಮನ್ವಯ ವಿಧಾನ ಅಥವಾ ಐಕ್ಯತಾ ವಿಧಾನ ಎನ್ನುತ್ತಾರೆ.
- ಶಾಲೆಯಲ್ಲಿ ಪರಿಸರ ಶಿಕ್ಷಣವನ್ನು ಬೋಧಿಸಲು ಈ ವಿಧಾನ ಬಹು ಉಪಯುಕ್ತವಾಗಿದೆ.

**ಚರ್ಚಾ ಪದ್ಧತಿ:** ಒಂದು ವಿಷಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಪರಿಶೀಲನೆ ಮಾಡಿ, ವಿಶ್ಲೇಷಿಸಿ, ಹೋಲಿಸಿ ಮತ್ತು ಮೌಲ್ಯಮಾಪನ ಮಾಡಿ ನಿರ್ಣಯ ಕೈಗೊಳ್ಳುವ ಕ್ರಮವನ್ನು ಚರ್ಚಾಕ್ರಮ/ ಚರ್ಚಾ ಪದ್ಧತಿ ಎಂದು ಕರೆಯುತ್ತಾರೆ.

### ಪ್ರಾತ್ಯಕ್ಷಿಕೆ ಪದ್ಧತಿ



- ಕ್ಲಾಸ್ ಪ್ರಕಾರ ತತ್‌ಕ್ಷಣವೇ ಗ್ರಹಿಸುವಂತಹ ಹಾಗೂ ಚಿರಕಾಲ ಸ್ಮೃತಿಪಟಲದಲ್ಲಿ ಉಳಿಯುವಂತಹ ಜ್ಞಾನವನ್ನು ಒದಗಿಸುವ ಉದ್ದೇಶಗಳಿಗಾಗಿ ಬಳಸುವ ಪದ್ಧತಿಯೇ ಪ್ರಾತ್ಯಕ್ಷಿಕಾ ಪದ್ಧತಿಯಾಗಿದೆ.
- ಯಾವುದೇ ಚಟುವಟಿಕೆಯನ್ನು ಮಾಡುವ ವಿಧಾನವನ್ನು ಇದರಲ್ಲಿ ಪ್ರದರ್ಶಿಸುವುದೇ ಪ್ರಾತ್ಯಕ್ಷಿಕೆ ಪದ್ಧತಿಯಾಗಿದೆ. ಈ ಪದ್ಧತಿಯಲ್ಲಿ ಮಗುವು ನೋಡುತ್ತಾ ಕಲಿಯುತ್ತಾನೆ.

### ಸಮೀಕ್ಷಾ ಪದ್ಧತಿ


- ಈ ಪದ್ಧತಿಯಲ್ಲಿ ತಮ್ಮ ಊರ ಸುತ್ತಮುತ್ತಲಿರುವ ಪ್ರದೇಶದ ಭೌಗೋಳಿಕ, ಸಾಮಾಜಿಕ, ಜೈವಿಕ ಪರಿಸರದ ಪರಿಸ್ಥಿತಿಯನ್ನು ನಿರೀಕ್ಷಣೆಯಿಂದ ಯೋಜನಾಬದ್ಧವಾಗಿ ಅಭ್ಯಾಸ ಮಾಡುತ್ತಾರೆ.
- ಸಾಮೂಹಿಕವಾಗಿ ಒಂದೊಂದೇ ಸಮಸ್ಯೆಯನ್ನು ಬಿಡಿಸುತ್ತಾರೆ. ಅದಕ್ಕಾಗಿ ಅವರ ಅವಲೋಕನ, ವಿಷಯ ಸಂಗ್ರಹ, ವರ್ಗೀಕರಣ, ವರದಿ, ಲೇಖನ ಮುಂತಾದವುಗಳ ಮೂಲಕ ಈ ಪ್ರಸ್ತುತ ವಿಷಯದ ಪರಿಚಯ ಮಾಡಿಕೊಳ್ಳುತ್ತಾರೆ.
- ಒಟ್ಟಿನಲ್ಲಿ ಈ ಚಟುವಟಿಕೆಯಲ್ಲಿ ಮಕ್ಕಳು ತಾವು ಸಂಶೋಧಿಸಿದ ಸಂಗತಿಗಳಿಗಿಂತ ಸಂಶೋಧನೆಯ ಅನುಭವ ಪಡೆಯುವುದು ಮುಖ್ಯವಾಗಿದೆ. ವೈಜ್ಞಾನಿಕ ರೀತಿ-ನೀತಿಗಳನ್ನು ಅನುಸರಿಸುವುದು ಈ ಪದ್ಧತಿಯ ವೈಶಿಷ್ಟ್ಯವಾಗಿದೆ.
- ಅನೇಕ ಬೋಧನಾ ವಿಧಾನಗಳ ಇತಿಮಿತಿಗಳ ಅನುಭವದಿಂದ ರೂಪಿಸಲ್ಪಟ್ಟ ವಿಧಾನವೇ ಸಮೀಕ್ಷಣಾ ಪದ್ಧತಿಯಾಗಿದೆ.

**ಪಾತ್ರ ನಿರ್ವಹಣಾ ಪದ್ಧತಿ:** ಪರಿಸರ ಶಿಕ್ಷಣದ ಮೂಲ ಸಂದೇಶಗಳು, ಪರಿಸರ ಸಂಬಂಧಿ ವಿಚಾರಗಳು ಮತ್ತು ಪರಿಸರ ಸಮಸ್ಯೆಗಳನ್ನು ವಿವಿಧ ಪಾತ್ರಗಳಲ್ಲಿ ಅಭಿನಯದ ಮೂಲಕ ನಿರೂಪಿಸುವ ಚಟುವಟಿಕೆಯನ್ನು ಪಾತ್ರ ನಿರ್ವಹಣಾ ಪದ್ಧತಿ ಎಂದು ಕರೆಯುತ್ತಾರೆ.

## ಶಿಶು ಶಿಕ್ಷಣ ಪದ್ಧತಿ-ಗಣಿತ (Child Education System- Mathematics)

### ಗಣಿತದ ಅರ್ಥ ಮತ್ತು ವ್ಯಾಪ್ತಿ

ಪ್ರಾಚೀನ ನಾಗರಿಕತೆಗಳಲ್ಲಿ ಪ್ರಾಣಿಗಳು ಮತ್ತು ವಸ್ತುಗಳನ್ನು ವ್ಯವಸ್ಥಿತವಾಗಿ ಎಣಿಕೆ ಮಾಡುವದಕ್ಕೋಸ್ಕರ ಅಂಕಿ-ಸಂಖ್ಯೆಗಳ ಬೆಳವಣಿಗೆ ಮೊದಲಾಯಿತು. ಈಜಿಪ್ತ ನಾಗರಿಕತೆಯಲ್ಲಿ ಹೈರೋಗ್ಲಿಫಿಕ್ಸ್ ಸಂಖ್ಯೆಗಳಿಗೆ ಮತ್ತು ಪದಗಳ ಸಂಕೇತವಾಗಿ ವಸ್ತು ಚಿತ್ರದ ಶೈಲಿಯಲ್ಲಿ ಎಣಿಕೆ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ಪ್ರಾಚೀನ ಕಾಲದಿಂದಲೂ ಹಂತ-ಹಂತವಾಗಿ ಹಲವಾರು ಸಂಶೋಧನೆಗಳ ಮೂಲಕ ಗಣಿತವು ಇಂದು ಹೆಮ್ಮರವಾಗಿ ಬೆಳೆದಿದೆ.




### ಗಣಿತದ ಅರ್ಥ

ಸಾಮಾನ್ಯ ಗಣಿತವು ಅಂಕಗಣಿತ, ಬೀಜಗಣಿತ ಹಾಗೂ ರೇಖಾಗಣಿತವೆಂದು ಮೂರು ವಿಭಾಗಗಳನ್ನು ಹೊಂದಿರುತ್ತದೆ. ಅಂಕಗಣಿತವನ್ನು ಅಂಕಿ ಸಂಖ್ಯೆಗಳ ಅಧ್ಯಯನವೆಂದು, ಬೀಜಗಣಿತವನ್ನು ಬೀಜೋಕ್ತಿಗಳ ಅಧ್ಯಯನವೆಂದು ಹಾಗೂ ರೇಖಾಗಣಿತವನ್ನು ಬಿಂದು, ರೇಖಾಖಂಡ ಹಾಗೂ ಸಮತಲ ಇನ್ನೂ ಮುಂತಾದ ಪರಿಕಲ್ಪನೆಗಳ ಅಧ್ಯಯನವೆಂದು ಕರೆಯಲಾಗುತ್ತದೆ.

### ಗಣಿತದ ಪಿತಾಮಹರು

- ಅಂಕಗಣಿತದ ಪಿತಾಮಹ-ಬ್ರಹ್ಮಗುಪ್ತ
- ಬೀಜಗಣಿತದ ಪಿತಾಮಹ- **ಡಿಯೋಫಾಂಟಸ್**
- ರೇಖಾಗಣಿತದ ಪಿತಾಮಹ- **ಯೂಕ್ಲಿಡ್**

Scanned with CamScanner

## ಗಣಿತದ ವ್ಯಾಖ್ಯಾನಗಳು

ಶಿಕ್ಷಣ ತಜ್ಞರು, ವಿಷಯ ತಜ್ಞರು, ಗಣಿತ ಶಾಸ್ತ್ರಜ್ಞರು, ಇತಿಹಾಸಕಾರರು, ಹಲವಾರು ನಿಘಂಟುಗಳು ಗಣಿತಶಾಸ್ತ್ರದ ಕುರಿತು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

- **ಎಚ್.ಜಿ. ವೆಲ್ಸ್–** "ನವೀನ ಗಣಿತವು ಭಾಷೆಗೆ ಒಂದು ಸಹಕಾರಿ, ರೀತಿ ಮತ್ತು ರಾಶಿಗಳ ವಿಷಯವಾಗಿ ತಿಳಿಸಲು ಸಾಧರಣ ಭಾಷೆಗಿಂತ ಹೆಚ್ಚು ಕರಾರುವಕ್ಕಾಗಿ ಸಂತೋಷವಾಗಿ ಮತ್ತು ಸಿದ್ಧವಾಗಿ ನಿರೂಪಿಸಲು ಅವಕಾಶ ಕಲ್ಪಿಸುತ್ತದೆ".
- **ರೋಜರ್ ಬೇಕನ್–** "ಗಣಿತವು ಎಲ್ಲ ವಿಜ್ಞಾನಗಳ ಬಾಗಿಲು ಮತ್ತು ಬೀಗದ ಕೈ ಇದ್ದಂತೆ. ಗಣಿತವಿಲ್ಲದ ವಿಜ್ಞಾನವು ಅರ್ಥವಿಲ್ಲದ್ದು ಮತ್ತು ಹಾನಿಕಾರಕವು. ಇದನ್ನು ಮರೆತವರಿಗೆ ಜಗತ್ತಿನ ವಿಜ್ಞಾನ ಮತ್ತು ಅಸ್ತಿತ್ವದ ಅರಿವಾಗದು. ಇದಕ್ಕಿಂತ ಕೆಟ್ಟದ್ದು ಎಂದರೆ ಗಣಿತದ ಜ್ಞಾನವಿಲ್ಲದವರಿಗೆ ತಮ್ಮ ಅಜ್ಞಾನದ ಅರಿವೂ ಆಗದೆ ತಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾರರು".

## ಗಣಿತದ ಸ್ವರೂಪ

ಗಣಿತ ವಿಷಯದಲ್ಲಿ ಅಂಕಿ-ಸಂಖ್ಯೆ, ಸಂಕೇತಗಳೇ ಮುಖ್ಯ. ಗಣಿತದ ಸ್ವರೂಪಕ್ಕೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

- ಸಾಮಾನ್ಯ ಗಣಿತವು ಅಂಕಗಣಿತ, ಬೀಜಗಣಿತ, ರೇಖಾಗಣಿತ ಎಂಬ ಮೂರು ಭಾಗಗಳನ್ನು ಹೊಂದಿದೆ. ಗಣಿತವು ಸರಳತೆ, ನಿಖರತೆ, ಸ್ಪಷ್ಟತೆ ಹಾಗೂ ಸತ್ಯಾನ್ವೇಷಣೆಯ ವಿಜ್ಞಾನವಾಗಿದೆ.
- ಗಣಿತವು ಕ್ರಮಬದ್ಧವಾದ ಅಂಕಿ ಸಂಖ್ಯೆಗಳ ವಿಜ್ಞಾನವಾಗಿದೆ.
- ಗಣಿತವು ಅಳತೆಯ ಹಾಗೂ ಪರಿಮಾಣ ವಿಜ್ಞಾನವಾಗಿದೆ.
- ಗಣಿತವು ಎಣಿಕೆಯ ಹಾಗೂ ಲೆಕ್ಕಾಚಾರ ಮಾಡುವ ವಿಜ್ಞಾನವಾಗಿದೆ.
- ಫಲಿತಾಂಶವನ್ನು ತಾಳೆ ನೋಡುವ ಗುಣವನ್ನು ಗಣಿತವು ಹೊಂದಿದೆ.
- ಗಣಿತವು ಸಂಕಲನ, ವ್ಯವಕಲನ, ಗುಣಾಕಾರ ಹಾಗೂ ಭಾಗಾಕಾರ ಎಂಬ ನಾಲ್ಕು ಪ್ರಮುಖ ಮೂಲಭೂತ ಕ್ರಿಯೆಗಳನ್ನು ಒಳಗೊಂಡಿದೆ.
- ಗಣಿತವು ವರ್ಗ, ವರ್ಗಮೂಲ, ಘನ, ಘನಮೂಲ, ಲಸಾಅ, ಮಸಾಅ ಮುಂತಾದ ಕ್ರಿಯೆಗಳನ್ನು ಒಳಗೊಂಡಿದೆ. ಗಣಿತವು ಮನುಷ್ಯ ನಿಗೆ ಸೌಂದರ್ಯ ಪ್ರಜ್ಞೆ ಬೆಳೆಸುವುದರ ಜೊತೆಗೆ ಮನರಂಜನೆಯನ್ನೂ ಸಹ ಒದಗಿಸುತ್ತದೆ.

## ಗಣಿತ ಬೋಧನೆಯ ಗುರಿಗಳು / ಮೌಲ್ಯಗಳು

- ಶಿಸ್ತಿನ ಮೌಲ್ಯ:
- ಉಪಯುಕ್ತತೆ ಮೌಲ್ಯ:

ಗಣಿತವು ಎಲ್ಲಾ ಕ್ಷೇತ್ರಗಳಲ್ಲಿ ಉಪಯೋಗಿಸಲ್ಪಡುವ, ಎಲ್ಲರಿಗೂ ವ್ಯವಸ್ಥಿತವಾಗಿ, ಸಂಘಟನಾತ್ಮಕವಾಗಿ ಯಶಸ್ವಿ ಜೀವನ ನಡೆಸಲು ಸಹಾಯ ಮಾಡುವ ವಿಷಯವಾಗಿದೆ. ಇದರ ಉಪಯುಕ್ತತೆಯಿಂದ ನಮ್ಮ ಜೀವನದ ಹಲವಾರು ಕಾರ್ಯಗಳು ಯಶಸ್ವಿಯಾಗಿ ಸಾಗುವುವು.

- **ನೈತಿಕ ಮೌಲ್ಯ:** ವಿದ್ಯಾರ್ಥಿಗಳಲ್ಲಿ ಸಹಕಾರ, ಪ್ರೀತಿ, ಸ್ವಚ್ಛತೆ, ಸತ್ಯ, ಸಮಾನತೆ ಮುಂತಾದ ಗುಣಗಳನ್ನು ಬೆಳೆಸಿದಾಗ ಅವರಲ್ಲಿ ನೈತಿಕ ಮೌಲ್ಯಗಳು ಅಭಿವೃದ್ಧಿಯಾಗುವುವು. ಗಣಿತ ವಿಷಯವು ವಿದ್ಯಾರ್ಥಿಗಳಲ್ಲಿ ಈ ಎಲ್ಲ ಮೌಲ್ಯಗಳನ್ನು ಬೆಳೆಸುವುದರ ಜೊತೆಗೆ ನೈತಿಕ ಮೌಲ್ಯಗಳನ್ನೂ ಬೆಳೆಸುತ್ತದೆ.
- **ಬೌದ್ಧಿಕ ಮೌಲ್ಯ:** ವಿದ್ಯಾರ್ಥಿಗಳಲ್ಲಿ ತಾರ್ಕಿಕ ಶಕ್ತಿ, ಆಲೋಚನಾ ಶಕ್ತಿ, ವಿವೇಚನಾ ಶಕ್ತಿ, ವಿಚಾರ ಶಕ್ತಿ, ಸ್ಮರಣ ಶಕ್ತಿ, ಅನ್ವೇಷಣೆ, ಸೃಜನಾತ್ಮಕತೆ ಮುಂತಾದ ಗುಣಗಳನ್ನು ಬೆಳೆಸುವುದರಿಂದ ಬೌದ್ಧಿಕ ಪ್ರಬುದ್ಧತೆಯನ್ನು ಪಡೆಯುವರು.
- **ಸಾಮಾಜಿಕ ಮೌಲ್ಯ:** ಇಂದಿನ ಆಧುನಿಕ ಯುಗದಲ್ಲಿ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಬೆಳೆಸುವುದು ಅತ್ಯಂತ ಮಹತ್ವಪೂರ್ಣವಾಗಿದೆ. ಸಾಮಾಜಿಕ ಮೌಲ್ಯಗಳಾದ ಸಹಕಾರ, ಪರಸ್ಪರ ಸೇವಾ ಮನೋಭಾವ, ಸಹಾಯ, ನ್ಯಾಯ, ಪ್ರೀತಿ ಮುಂತಾದವುಗಳನ್ನು ವಿದ್ಯಾರ್ಥಿಗಳಲ್ಲಿ ಹೆಚ್ಚಿಸುವುದು ಅವಶ್ಯಕವಾಗಿದೆ.
- **ಆರ್ಥಿಕ ಮೌಲ್ಯ:** ಗಣಿತದ ಮೂಲಕ ವಿದ್ಯಾರ್ಥಿಗಳಿಗೆ ಉಳಿತಾಯ ಮತ್ತು ಬ್ಯಾಂಕ್ ವ್ಯವಹಾರಗಳು, ಸರಳಬಡ್ಡಿ, ಚಕ್ರಬಡ್ಡಿ, ಭದ್ರತಾ ಠೇವಣಿ, ಪಿಗ್ಮಿ ಯೋಜನೆ ಮುಂತಾದವುಗಳ ಕಲ್ಪನೆಯನ್ನು ತಿಳಿಸುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಉಳಿತಾಯ ಮನೋಭಾವನೆಯನ್ನು ಬೆಳೆಸಲು ಸಹಾಯಕವಾಗಿದೆ.

## ಗಣಿತ ಬೋಧನೆಯ ಉದ್ದೇಶಗಳು



- **ಜ್ಞಾನ:** ಈ ಹಂತದಲ್ಲಿ ವಿದ್ಯಾರ್ಥಿಯು ವಿಷಯ ವಸ್ತುವಿನ ಸಂಗತಿಗಳ, ತತ್ವಗಳ, ಪದಗಳ, ಪರಿಕಲ್ಪನೆಗಳ ಜ್ಞಾನ ಪಡೆದುಕೊಳ್ಳುವನು. ಸಮಸ್ಯೆಗಳನ್ನು ಬಿಡಿಸುವ ಜ್ಞಾನ, ಸಂಘಟನಾ ವಿನ್ಯಾಸದ ಜ್ಞಾನ, ಸಾಂಕೇತಿಕ ಭಾಷೆ, ಆಕೃತಿ, ಸೂತ್ರ ಮುಖ್ಯ ಶಬ್ದ ಮತ್ತು ವ್ಯಾಖ್ಯಾನಗಳನ್ನು ಸ್ಮರಣೆಗೆ ತಂದುಕೊಳ್ಳುತ್ತಾನೆ.
- **ತಿಳುವಳಿಕೆ:** ಜ್ಞಾನಾತ್ಮಕ ವಲಯದಲ್ಲಿನ ಮೇಲ್ಮಟ್ಟದ ವಲಯವಾಗಿದೆ. ಈ ಹಂತದಲ್ಲಿ ವಿದ್ಯಾರ್ಥಿಯು ವಿವಿಧ ವಸ್ತುವಿನ ಪದಗಳ, ಪರಿಕಲ್ಪನೆಗಳ, ತತ್ವಗಳ, ಸಂಗತಿಗಳ, ಸೂತ್ರಗಳ ವಿವರಣೆ ನೀಡುವನು.
- **ಕೌಶಲ್ಯ:** ಈ ಹಂತದಲ್ಲಿ ವಿದ್ಯಾರ್ಥಿಯು ವಿಷಯ ವಸ್ತುಗಳಿಗೆ ಸಂಬಂಧಿಸಿದಂತೆ ಉಪಕರಣಗಳನ್ನು ಬಳಸುವ, ಆಕೃತಿಗಳನ್ನು ರಚಿಸುವ, ಲೆಕ್ಕಗಳನ್ನು ತೀವ್ರವಾಗಿ, ನಿಖರವಾಗಿ ಬಿಡಿಸುವ ಹಾಗೂ ಓದುವ ಕೌಶಲ್ಯವನ್ನು ಪಡೆಯುವನು.
- **ಅನ್ವಯ:** ವಿದ್ಯಾರ್ಥಿಯು ತಾನು ಕಲಿತಂತಹ ತತ್ವ ಅಥವಾ ಕಲ್ಪನೆಗಳನ್ನು ಬೇರೆ ಬೇರೆ ಸನ್ನಿವೇಶಗಳಿಗೆ ಬೇರೆ ಬೇರೆ ರೀತಿಯಾಗಿ ಉಪಯೋಗಿಸುವ ಸಾಮರ್ಥ್ಯ ಹೊಂದುವನು.
- **ಮನೋಭಾವ:** ವಿದ್ಯಾರ್ಥಿಗಳು ಆಲಿಸುವ, ಇಷ್ಟಪಡುವ, ಹೊಗಳುವ, ಒಪ್ಪಿಕೊಳ್ಳುವ ಇತ್ಯಾದಿ **ಧನಾತ್ಮಕ ಮನೋಭಾವಗಳನ್ನು**, ಪ್ರಯತ್ನಿಸುವ, ಹುಡುಕುವ, ಯೋಚಿಸುವ, ಪರೀಕ್ಷಿಸುವ, ಸಾಮಾನ್ಯೀಕರಿಸುವ **ವೈಜ್ಞಾನಿಕ ಮನೋಭಾವವನ್ನು** ಹೊಂದವರು.
- **ಆಸಕ್ತಿ:** ವಿದ್ಯಾರ್ಥಿಗಳು ವಿಷಯ ವಸ್ತುವಿನ ಕುರಿತು ಹೆಚ್ಚಿನ ಮಾಹಿತಿಯನ್ನು ತಿಳಿಯುವ ಆಸಕ್ತಿ ಹೊಂದುವರು. ಅಂದರೆ ವಿದ್ಯಾರ್ಥಿಗಳು ಪ್ರಮುಖ ವಿಷಯಗಳ ಕುರಿತಾಗಿ ಓದುವ, ಚರ್ಚಿಸುವ, ಕೇಳುವ, ತಯಾರಿಸುವ, ಸಂರಕ್ಷಿಸುವ, ಸಂಗ್ರಹಿಸುವ, ಸಂಘಟಿಸುವ ಆಸಕ್ತಿ ಹೊಂದುವರು.
- **ಪ್ರಶಂಸೆ:** ಇಲ್ಲಿ ವಿದ್ಯಾರ್ಥಿಯು ವಿಷಯ ವಸ್ತುವಿನ ಕುರಿತು ಪ್ರಶಂಸೆಯನ್ನು ವ್ಯಕ್ತಪಡಿಸುವನು. ವಿದ್ಯಾರ್ಥಿಗಳು ವಿಷಯ ವಸ್ತುವನ್ನು ಕುರಿತು ಮಾರ್ಗದರ್ಶಿಸುವವರು. ಮೆಚ್ಚುಗೆ ವ್ಯಕ್ತಪಡಿಸುವವರು, ವಿವರಿಸುವರು.

Scanned with CamScanner

## ಪಠ್ಯಕ್ರಮ ಮತ್ತು ವಿಷಯ ಸೂಚಿ

ಶಿಕ್ಷಣ ಕ್ಷೇತ್ರದಲ್ಲಿ ನಿರ್ಧರಿಸಲ್ಪಟ್ಟ ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ತಲುಪಲು ಅನುಸರಿಸುವ ಅಭ್ಯಾಸಕ್ರಮ, ಬೋಧನಾ ವಿಧಾನಗಳು, ಕಲಿಕಾ ತಂತ್ರಗಳು ಹಾಗೂ ಕಲಿಕಾಕಾರನು ವರ್ಗ ಕೋಣೆಯಲ್ಲಿ, ಪ್ರಯೋಗಾಲಯದಲ್ಲಿ, ಆಟದ ಮೈದಾನದಲ್ಲಿ, ಶಿಕ್ಷಕರೊಡನೆ, ಪಾಲಕರೊಡನೆ, ಸಮಾಜದೊಡನೆ ಬರುವ ಸಂಪರ್ಕದಿಂದ ಪಡೆಯುವ ಅನುಭವಗಳೆಲ್ಲವೂ ಪಠ್ಯಕ್ರಮದಲ್ಲಿ ಸೇರಿರುತ್ತವೆ.

### ಪಠ್ಯಕ್ರಮದ ವ್ಯಾಖ್ಯಾನಗಳು

- **ಜಾನ್ ಡ್ಯೂಯಿ**–"ಉದ್ದೇಶಿತ ಸತತ ಕ್ರಿಯೆಯಲ್ಲಿ ಸಂಪನ್ಮೂಲಗಳಾಗಿ ಅಥವಾ ತೊಂದರೆಗೊಳಗಾಗಿ ಬರುವ ವಸ್ತುಗಳು, ವಿಚಾರಗಳು ಮತ್ತು ಅನುಭವಗಳೇ ಪಠ್ಯಕ್ರಮ".
- **ಫ್ರೊಬೆಲ್**– "ಮಾನವ ಜನಾಂಗದ ಜ್ಞಾನ ಮತ್ತು ಅನುಭವಗಳ ಸಾರ ಸಂಗ್ರಹವೇ ಪಠ್ಯಕ್ರಮ".
- **ಮನ್ರೋ**– "ಪಠ್ಯಕ್ರಮವು ಶಾಲೆಯಲ್ಲಿಯ ಎಲ್ಲಾ ಅನುಭವಗಳನ್ನು ಸದುಪಯೋಗಪಡಿಸಿಕೊಳ್ಳಲು ಬೇಕಾಗಿರುವ ಶಿಕ್ಷಣದ ಗುರಿಗಳನ್ನು ಮೈಗೂಡಿಸಿಕೊಂಡಿರುತ್ತದೆ".
- **ಕ್ರೋ ಮತ್ತು ಕ್ರೋ**– "ಮಾನಸಿಕವಾಗಿ, ಭಾವನಾತ್ಮಕವಾಗಿ, ಸಾಮಾಜಿಕವಾಗಿ, ಶಾರೀರಿಕವಾಗಿ ಮತ್ತು ನೈತಿಕವಾಗಿ ವಿದ್ಯಾರ್ಥಿಗಳು ಬೆಳೆಯಲು ಸಹಾಯ ಮಾಡುವ ಗುರಿಗಳನ್ನು ಹೊಂದಿರುವ ಶಾಲೆಯ ಒಳಗೆ ಮತ್ತು ಹೊರಗೆ ನೀಡಬಹುದಾದ ಅನುಭವಗಳ ಸೂಚನಾ ಪಟ್ಟಿಯೇ ಪಠ್ಯವಸ್ತು".

## ಪಠ್ಯಕ್ರಮ ಮತ್ತು ವಿಷಯ ಸೂಚಿಯ ಉದ್ದೇಶಗಳು

- ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ಪಠ್ಯಕ್ರಮವನ್ನು ರಚಿಸಲಾಗಿದೆ.
- ಮಕ್ಕಳನ್ನು ಮುಂದಿನ ಭಾವೀ ಜೀವನಕ್ಕೆ ತಯಾರು ಮಾಡುವುದು ಅವರು ಸ್ವತಂತ್ರವಾಗಿ ಬದುಕುವ ಸಾಮರ್ಥ್ಯ ಹೊಂದುವಂತೆ ಮಾಡುವುದು.
- ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಮತ್ತು ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಮಾಡುವುದು.
- ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಗಯ್ಯುವುದು. ಅಂದರೆ ಮಗುವಿನ ಶಾರೀರಿಕ, ಸಾಮಾಜಿಕ, ಭಾವನಾತ್ಮಕ, ಬೌದ್ಧಿಕ ಕ್ಷೇತ್ರಗಳಲ್ಲಿ ವಿಕಾಸ ಸಾಧಿಸುವುದು.
- ಪಠ್ಯಕ್ರಮವನ್ನು ದಿನನಿತ್ಯ ಜೀವನದೊಂದಿಗೆ ನೈಜ ಅನುಭವಗಳೊಂದಿಗೆ ಸಂಬಂಧೀಕರಿಸುವುದು.
- ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯದ ಮಾಪನಕ್ಕಾಗಿ ಸೂಕ್ತ ಮೌಲ್ಯಮಾಪನ ವಿಧಾನಗಳು, ಸಾಧನಗಳು ಹಾಗೂ ತಂತ್ರಗಳನ್ನು ರೂಪಿಸುವುದು.

### ಪಠ್ಯಕ್ರಮದ ರಚನಾ ತತ್ವಗಳು

- ಮಗು ಕೇಂದ್ರಿತ ತತ್ವ
- ಸಮಗ್ರತೆಯ ತತ್ವ
- ಚಟುವಟಿಕಾ ಕೇಂದ್ರೀಕೃತ ತತ್ವ
- ಶಿಥಿಲತೆಯ ತತ್ವ
- ಶಿಸ್ತಿನ ತತ್ವ
- ಸಂರಕ್ಷಣೆಯ ತತ್ವ
- ಪ್ರಾಯೋಗಿಕ ತತ್ವ
- ಸಮುದಾಯ ಕೇಂದ್ರಿತ ತತ್ವ
- ಸೃಜನಶೀಲತೆಯ ತತ್ವ
- ಮುಂದಾಲೋಚನೆಯ ತತ್ವ
- ಉಪಯುಕ್ತತೆಯ ತತ್ವ
- ಸಾಂಸ್ಕೃತಿಕ ತತ್ವ
- ವಿವಿಧತೆಯ ತತ್ವ
- ಸಹ ಸಂಬಂಧ ತತ್ವ

### ಪಠ್ಯಕ್ರಮದ ವಿಷಯ ವಸ್ತುವಿನ ಸಂಘಟನೆಯ ಮೇಲೆ ಪ್ರಭಾವ ಬೀರುವ ಅಂಶಗಳು

- ಶಿಕ್ಷಕ
- ಪಠ್ಯಪುಸ್ತಕಗಳು
- ಮೇಲ್ವಿಚಾರಣೆ ಮತ್ತು ಆಡಳಿತ
- ಮಾರ್ಗದರ್ಶನ ಮತ್ತು ಸಮಾಲೋಚನೆ
- ವಿದ್ಯಾರ್ಥಿಗಳು
- ಸಾಧನ ಸಲಕರಣೆಗಳು
- ಪರೀಕ್ಷೆ & ಮೌಲ್ಯಮಾಪನ

## ಗಣಿತ ಪಠ್ಯ ವಸ್ತುವಿನ ದೋಷಗಳು

- ಪಠ್ಯಕ್ರಮದಲ್ಲಿ ಚಟುವಟಿಕೆಗಳಿಗೆ ಮತ್ತು ವಿದ್ಯಾರ್ಥಿಗಳ ಸೃಜನಾತ್ಮಕತೆಗೆ ಅವಕಾಶ ಕಡಿಮೆ.
- ಪಠ್ಯಕ್ರಮವು ಎಲ್ಲ ಮನೋವೈಜ್ಞಾನಿಕ ತತ್ವಗಳ ಆಧಾರದ ಮೇಲೆ ರಚಿಸಲ್ಪಟ್ಟಿರುವುದಿಲ್ಲ. ಪ್ರಸ್ತುತ ಪಠ್ಯಕ್ರಮವು ವಿದ್ಯಾರ್ಥಿಗಳ ಅಭಿರುಚಿ, ಆಸಕ್ತಿ, ಮನೋಭಾವ ವೈಯಕ್ತಿಕ ಭಿನ್ನತೆ ಮುಂತಾದವುಗಳಿಗೆ ಕಡಿಮೆ ಪ್ರಾಶಸ್ತ್ಯ ನೀಡಿರುವುದು.
- ಎಲ್ಲಾ ಬೋಧನಾ ಉದ್ದೇಶಗಳಿಗನುಗುಣವಾಗಿ ಪಠ್ಯವಸ್ತುವಿನ ರಚನೆಯಾಗಿರುವುದಿಲ್ಲ.

## ಪಠ್ಯಕ್ರಮ ಸುಧಾರಣೆಗೆ ಪರಿಹಾರೋಪಾಯಗಳು

- ಪಠ್ಯಕ್ರಮವು ವಿದ್ಯಾರ್ಥಿಗಳ ಅಭಿರುಚಿ, ಆಸಕ್ತಿ, ಮನೋಭಾವ ವೈಯಕ್ತಿಕ ಭಿನ್ನತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು.
- ಪಠ್ಯವಸ್ತು ಮನೋವೈಜ್ಞಾನಿಕ ತತ್ವಗಳ ಆಧಾರವಾಗಿ ರಚಿಸಲ್ಪಡಬೇಕು.
- ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಪಠ್ಯ ವಸ್ತುವಿನಲ್ಲಿ ಸಮಾನ ಅವಕಾಶ ಕೊಡಬೇಕು.
- ಪಠ್ಯಕ್ರಮವು ಮಕ್ಕಳ ಮನೋಮಟ್ಟ, ವಯಸ್ಸು, ಬುದ್ಧಿಮಟ್ಟಕ್ಕನುಗುಣವಾಗಿ ರೂಪಗೊಳ್ಳಬೇಕು.
- ಪಠ್ಯಕ್ರಮವು ವಿದ್ಯಾರ್ಥಿಗಳಿಗೆ ಚಟುವಟಿಕೆಗಳನ್ನು ಹಾಗೂ ಅಭ್ಯಾಸಗಳನ್ನು ಒದಗಿಸುವಂತೆ ರಚನೆಯಾಗಬೇಕು.
- ಪಠ್ಯಕ್ರಮವು ವೈಜ್ಞಾನಿಕ ಚಟುವಟಿಕೆಗಳನ್ನು ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಒಳಗೊಂಡಿರಬೇಕು.




ಜ್ಞಾನಕ್ಕಾಗಿ ಹೋರಾಟ ವಾಟ್ಸಪ್ ಗ್ರೂಪ್ (ಚಂದು ರಾಜವಾಳ 7019177433)

Scanned with CamScanner